# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 138
Volume - 01 Issue - 138
ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269
Title- Code: KARKAN 28269
ಚಿತ್ರದುರ್ಗ
Chitradurga
ದಿನಾಂಕ: 13–12–2023 ಬುಧವಾರ
Date: 13-12-2023 Wednesday
ಪುಟ: 4
Page: 4
ಬೆಲೆ : ರೂ.2–00
Price: Rs. 2-00



**ಒಳಪುಟದ ಸುದ್ದಿಗಳು**

ಆಗ್ನೇಯ ಶಿಕ್ಷಕರ ಚುನಾವಣೆ: ಪರಶುರಾಂಪುರದಲ್ಲಿ ಶ್ರೀನಿವಾಸ್ ಪ್ರಚಾರ 2

ಸೇವಾ ಭದ್ರತೆ ನೀಡುವಂತೆ ಒತ್ತಾಯಿಸಿ ಅನಿರ್ಧಿಷ್ಟಾವಧಿ ಅಂಚೆ ಸಿಬ್ಬಂದಿ ಮುಷ್ಕರ 3

ಕವಿ ನಾಗತಿಹಳ್ಳಿಮಂಜುನಾಥ್‌ಗೆ ಕರುನಾಡ ಸಿರಿ ಸೇವಾ ರಾಜ್ಯ ಪ್ರಶಸ್ತಿ 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಕಾನೂನು ಪದವೀಧರರಿಗೆ ಪ್ರೋತ್ಸಾಹಧನಕ್ಕಾಗಿ ಅರ್ಜಿ

**ಚಿತ್ರದುರ್ಗ:** ಚಿತ್ರದುರ್ಗ ಜಿಲ್ಲೆಯ ನವ ಕಾನೂನು ಪದವೀಧರರಿಗೆ ಪ್ರತಿ ಮಾಹೆಯಾನ ರೂ.2,000/– ಪ್ರೋತ್ಸಾಹ ಧನ ನೀಡುವ ಸಂಬಂಧವಾಗಿ ಸರ್ಕಾರದ ಕಾನೂನು ಇಲಾಖೆಯವರು ಸೂಕ್ತ ಕ್ರಮ ಕೈಗೊಳ್ಳಲು ಕೋರಿದ್ದು, ಅದರಂತೆ ಜಿಲ್ಲೆಯ ಅರ್ಹ ನವ ಕಾನೂನು ಪದವೀಧರರಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 2024ರ ಜನವರಿ 12 ಅರ್ಜಿ ಸಲ್ಲಿಸಲು ಕೊನೆಯ ದಿನ. ಅರ್ಜಿಗಳನ್ನು ಡಿಸೆಂಬರ್ 13 ರಿಂದ ಸಲ್ಲಿಸಬಹುದಾಗಿದ್ದು, ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು. ಚಿತ್ರದುರ್ಗ ತಾಲ್ಲೂಕು ವ್ಯಾಪ್ತಿಯ ಅರ್ಹ ಅಭ್ಯರ್ಥಿಗಳು ನೇರವಾಗಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಚಿತ್ರದುರ್ಗ ಜಿಲ್ಲೆಯ ಇತರೆ ಎಲ್ಲಾ ತಾಲ್ಲೂಕುಗಳ ವ್ಯಾಪ್ತಿಯ ಅರ್ಹ ಅಭ್ಯರ್ಥಿಗಳು ಆಯಾ ತಾಲ್ಲೂಕಿನ ಹಿರಿಯ ಸಿವಿಲ್ ನ್ಯಾಯಾಧೀಶರ ಮೂಲಕ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದು. ಮೊಳಕಾಲ್ಮುರು ತಾಲ್ಲೂಕು ವ್ಯಾಪ್ತಿಯ ಅರ್ಹ ಅಭ್ಯರ್ಥಿಗಳು ಅಲ್ಲಿಯ ಸಿವಿಲ್ ನ್ಯಾಯಾಧೀಶರ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಅರ್ಹತೆಗಳು: ಈ ಯೋಜನೆಯಡಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಡಿಯಲ್ಲಿ ದಿನಾಂಕ:01–06–2022 ರಿಂದ 31–05–2023 ರವರೆಗಿನ ಅವಧಿಯಲ್ಲಿ ವಕೀಲರ ವೃತ್ತಿಗೆ ನೊಂದಾಯಿಸಿಕೊಂಡಿರತಕ್ಕದ್ದು. ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ವರಮಾನದ ಮಿತಿಯು ರೂ.40,000/–ಗಳನ್ನು ಮೀರತಕ್ಕದ್ದಲ್ಲ (ಆದಾಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು), ಸರ್ಕಾರಿ, ಅರೆ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ ವಯೋ ನಿವೃತ್ತಿ, ಕಡ್ಡಾಯ ನಿವೃತ್ತಿ ಮತ್ತು ಸ್ವ–ಇಚ್ಛಾ ನಿವೃತ್ತಿ ಹೊಂದಿದ ನಂತರ ವಕೀಲ ವೃತ್ತಿ ನಡೆಸಲು ಇಚ್ಚಿಸುವ ಕಾನೂನು ಪದವೀಧರರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ. ಅಂತಹ ಯಾವುದೇ ಸೇವೆಯಿಂದ ತೆಗೆದು ಹಾಕಲ್ಪಟ್ಟ ಕಾನೂನು ಪದವೀಧರರಿಗೆ ಸಹ ಅನ್ವಯವಾಗುವುದಿಲ್ಲ. ಇಂತಹದೇ ಸೌಲಭ್ಯವನ್ನು ಈ ಯೋಜನೆ, ಇತರೆ ಯೋಜನೆಯಡಿ ಅಥವಾ ರಾಜ್ಯ ಸರ್ಕಾರದ ಬೇರೆ ಯಾವುದೇ ಇಲಾಖೆಯ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಈ ಯೋಜನೆಯ ಸೌಲಭ್ಯಗಳಿಗೆ ಅರ್ಹರಾಗತಕ್ಕದ್ದಲ್ಲ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ನ್ಯಾಯಾಲಯ, ಚಿತ್ರದುರ್ಗ ಮತ್ತು ಜಿಲ್ಲೆಯ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯಗಳು ಹಾಗೂ ಸಿವಿಲ್ ಜಡ್ಜ್ ನ್ಯಾಯಾಲಯ, ಮೊಳಕಾಲ್ಮುರು ಹಾಗೂ ಜಿಲ್ಲೆಯ ಎಲ್ಲಾ ವಕೀಲರ ಸಂಘಗಳಲ್ಲಿ ಲಭ್ಯವಿರುವ ಮೇಲ್ಕಂಡ ಸರ್ಕಾರಿ ಆದೇಶದ ಪ್ರತಿಗಳಲ್ಲಿರುವ ಮಾರ್ಗಸೂಚಿಗಳನ್ನು ಮತ್ತು ಅರ್ಜಿ ನಮೂನೆಗಳನ್ನು ಪಡೆದುಕೊಳ್ಳಬಹುದಾಗಿದೆ. ಅರ್ಜಿಗಳನ್ನು ಸ್ವೀಕರಿಸುವ ನಿಗದಿತ ದಿನಾಂಕದ ನಂತರ ತಲುಪುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ತಿಳಿಸಿದ್ದಾರೆ.

### ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಚಾಲನೆ
# ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ವಿತರಣೆ

» **ಚಿತ್ರದುರ್ಗ**

ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ನೀಡುವ ಕಾರ್ಯಕ್ರಮಕ್ಕೆ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಚಾಲನೆ ನೀಡಿದರು.

ನಗರದ ಲೋಕಾಯುಕ್ತ ಕಚೇರಿ ಹಿಂಭಾಗದ ಜಿಲ್ಲಾ ಹೊಂಬೆಳಕು ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ಇವರುಗಳ ಸಂಯುಕ್ತಾಶ್ರಯದಲ್ಲಿ "ಇಂದೇ ಸಕಾಲ" ಎನ್ನುವ ಒಂದೇ ದಿನದಲ್ಲಿ ಹಿರಿಯ ನಾಗರಿಕರ ಗುರುತಿನ ಚೀಟಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಾರ್ವಜನಿಕರು ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು ಸರ್ಕಾರ ಸಕಾಲ ಯೋಜನೆ ಮೂಲಕ ಹಲವಾರು ಸೇವೆಗಳನ್ನು ನಾಗರಿಕರಿಗೆ ನೀಡುತ್ತಿದೆ. 60 ವರ್ಷ ಪೂರೈಸಿದ ಹಿರಿಯ ನಾಗರಿಕರಿಗೆ



ಗುರುತಿನ ಚೀಟಿ ನೀಡಲಾಗುತ್ತಿದೆ. ಇದರ ಜೊತೆಗೆ ಮುಂದಿನ ದಿನಗಳಲ್ಲಿ ಕಂದಾಯ ಇಲಾಖೆ ಸಹಯೋಗದೊಂದಿಗೆ ವೃದ್ಧಾಪ್ಯ ವೇತನ, ಸಂಧ್ಯಾಸುರಕ್ಷಾ ಯೋಜನೆ ಸೇರಿದಂತೆ ಸಾಮಾಜಿಕ ಭದ್ರತಾ ಯೋಜನೆಯ ಪಿಂಚಣಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತ್ವರಿತವಾಗಿ ಸೌಲಭ್ಯ ತಲುಪಿಸಲಾಗುವುದು. ಹಿರಿಯ ನಾಗರಿಕರ ಗುರುತಿನ ಚೀಟಿ ಹಾಗೂ ಪಿಂಚಣಿ ಸೌಲಭ್ಯವನ್ನು ಸ್ಥಳದಲ್ಲಿಯೇ ಮಂಜೂರು ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಹಿರಿಯ ನಾಗರಿಕರ ಗುರುತಿನ ಚೀಟಿ ಸೌಲಭ್ಯದಿಂದ ಬಸ್ ಪ್ರಯಾಣ ರಿಯಾಯಿತಿ ಸೌಲಭ್ಯ ಹಾಗೂ ಆದಾಯ ತೆರಿಗೆಯಲ್ಲಿ ಕೆಲ ವಿನಾಯಿತಿ ಸೌಲಭ್ಯ ದೊರೆಯಲಿದೆ. ಹಿರಿಯ ನಾಗರಿಕರಿಗೆ ಕಚೇರಿ ಅಲೆದಾಟ ಹಾಗೂ ಮಧ್ಯವರ್ತಿಗಳ ಹಾವಳಿಯ ತೊಂದರೆ ತಪ್ಪಿಸಲು ಒಂದೇ ದಿನದಲ್ಲಿ 40 ಮಂದಿ ಹಿರಿಯ ನಾಗರಿಗೆ ಹಿರಿಯ ನಾಗರಿಕರ ಗುರುತಿನ ಚೀಟಿ ವಿತರಣೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಎಂ.ವಿ.ವೀಣಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಪವಿತ್ರ, ಹಿರಿಯ ನಾಗರಿಕರ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಂಗಪ್ಪ ರೆಡ್ಡಿ, ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ರಶ್ಮಿ, ಸಕಾಲ ಜಿಲ್ಲಾ ಸಂಯೋಜಕ ಎಂ. ಆದರ್ಶ್, ಬಸವೇಶ್ವರ ವಿದ್ಯಾಲಯದ ಶಂಕರಪ್ಪ ಸೇರಿದಂತೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಬ್ಬಂದಿಗಳು ಹಾಗೂ ಹಿರಿಯ ನಾಗಕರಿಕರು ಇದ್ದರು.

# ವಿವಿಧ ಬೇಡಿಕೆ ಈಡೇರಿಸುವಂತೆ ಜಿಲ್ಲಾಧಿಕಾರಿ ಕಚೇರಿ ಎದುರು ಕೊಳಗೇರಿ ನಿವಾಸಿಗಳ ಪ್ರತಿಭಟನೆ

» **ಚಿತ್ರದುರ್ಗ**

ವಿವಿಧ ಬೇಡಿಕೆಗಳನ್ನು ಈಡೇರಿಸುಂತೆ ಕರ್ನಾಟಕ ಕೊಳಗೇರಿ ನಿವಾಸಿಗಳ ಸಂಯುಕ್ತ ಸಂಘಟನೆಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿ ಜಿಲ್ಲಾಡಳಿತದ ಮೂಲಕ ರಾಜ್ಯದ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

ವಿಜಯನಗರ ಬಡಾವಣೆ, ಸಿಹಿನೀರು ಹೊಂಡ, ಚೋಳಗುಡ್ಡ, ಕಾಮನಬಾವಿ ಬಡಾವಣೆ, ಹಿಮ್ಮತ್‌ನಗರ, ಸಿ.ಕೆ.ಪುರ, ಕಬೀರಾನಂದನಗರ, ಬಾರಾ ಹಿಮಾಮ್ ಮಕಾನ್ ಹಿಂಬಾಗ, ಮೇಕೆಬಂಡೆ ಇನ್ನು ಮೊದಲಾದ ಕೊಳಚೆ ಪ್ರದೇಶಗಳಲ್ಲಿ ಇನ್ನು ಹಕ್ಕುಪತ್ರಗಳನ್ನು ವಿತರಿಸಿರುವುದಿಲ್ಲ. ಹೊಸದಾಗಿ ನೀಡುತ್ತಿದ್ದ ಬಿ.ಪಿ.ಎಲ್. ಕಾರ್ಡ್ ಸ್ಥಗಿತಗೊಳಿಸಿದ್ದು, ಫಲಾನುಭವಿಗಳು ಅರ್ಜಿ ಸಲ್ಲಿಸಲು ಅವಕಾಶವಿಲ್ಲದಂತಾಗಿದೆ.ಇದರಿಂದ ಬಡವರಿಗೆ ಸಿಗುತ್ತಿದ್ದ ಉಚಿತ




ಅಕ್ಕಿಗೂ ಭಂಗವಾಗಿದೆ. ಕೊಳಗೇರಿ ನಿವಾಸಿಗಳು ಜೀವಿಸುವುದು ಕಷ್ಟವಾಗಿರುವುದರಿಂದ ಕೂಡಲೆ ಉಚಿತಅಕ್ಕಿನೀಡಬೇಕೆಂದುಪ್ರತಿಭಟನಾಕಾರರು ಒತ್ತಾಯಿಸಿದರು.

ಜಿಲ್ಲಾಸ್ಪತ್ರೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದ ಕಾರಣ ಬಡವರು ಚಿಕಿತ್ಸೆಯಿಲ್ಲದೆ ಪರದಾಡುವಂತಾಗಿದೆ. ಆಶ್ರಯ ಬಡಾವಣೆಯಲ್ಲಿ ವಾಸಿಸುತ್ತಿರುವವರಿಗೆ ಸಾಲ ತೀರುವಳಿಯಾಗಿದ್ದರೂ ನಗರಸಭೆಯಲ್ಲಿ ಸಾಲ ತೀರುವಳಿ ಪತ್ರ ನೀಡುತ್ತಿಲ್ಲ ಎಂದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕರ್ನಾಟಕ ಕೊಳಗೇರಿ ನಿವಾಸಿಗಳ ಸಂಯುಕ್ತ ಸಂಘಟನೆ ಜಿಲ್ಲಾ ಸಮಿತಿ ಅಧ್ಯಕ್ಷ ಗಣೇಶ್ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಮುಸ್ಲಿಂ ಕಲ್ಚರಲ್ ಅಕಾಡೆಮಿ ಅಧ್ಯಕ್ಷ ಎಂ.ಹನೀಫ್, ಕೆ.ಕೆ.ಎನ್.ಎಸ್.ಎಸ್.ಜಿಲ್ಲಾ ಉಪಾಧ್ಯಕ್ಷ ಎನ್.ರಂಗಸ್ವಾಮಿ, ಹೆಚ್.ಮೈಲಾರಪ್ಪ, ಇಮಾಂಸಾಬ್ ಇನ್ನು ಅನೇಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# 22 ನಿರಾಶ್ರಿತರಿಗೆ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ



» **ಚಿತ್ರದುರ್ಗ**

ಜಿಲ್ಲಾ ಆಸ್ಪತ್ರೆ ವತಿಯಿಂದ ರಾಷ್ಟ್ರೀಯ ಅಂದತ್ವ ನಿವಾರಣಾ ಕಾರ್ಯಕ್ರಮದ ಅಡಿಯಲ್ಲಿ ಸೋಮವಾರ ಚಿತ್ರದುರ್ಗ ತಾಲ್ಲೂಕಿನ ಗೋನೂರು ಸಮೀಪದ ನಿರಾಶ್ರಿತರ ಪರಿಹಾರ ಕೇಂದ್ರದ 22 ನಿರಾಶ್ರಿತರಿಗೆ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ನಿರ್ವಹಿಸಲಾಯಿತು.

ಈ ಹಿಂದೆ ನಿರಾಶ್ರಿತರಿಗೆ ಪರಿಹಾರ ಕೇಂದ್ರದಲ್ಲಿ ದೃಷ್ಠಿ ಪರೀಕ್ಷೆ ಮಾಡಿದಾಗ ಮಂದಗತಿಯಲ್ಲಿದ್ದು, ಶಸ್ತ್ರಚಿಕಿತ್ಸೆಯು ಸಂಪೂರ್ಣ ಯಶಸ್ವಿಯಾಗಿದ್ದು, ಆರೋಗ್ಯದಿಂದ ಇದ್ದಾರೆ. ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಫಲಾನುಭವಿಗಳು ವೈದ್ಯರು ತಿಳಿಸಿದ ಅಗತ್ಯ ಮುನ್ನಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು ಎಂದು ಜಿಲ್ಲಾಸ್ಪತ್ರೆಯ ನೇತ್ರ ತಜ್ಞರಾದ ಪ್ರದೀಪ್ ತಿಳಿಸಿದರು. ಸಾರ್ವಜನಿಕರು ಈ ಉಚಿತ ಆರೋಗ್ಯ ಸೇವಾ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ರಾಷ್ಟ್ರೀಯ ಅಂದತ್ವ ನಿವಾರಣಾ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಜಿಲ್ಲಾ ಶಸ್ತಚಿಕಿತ್ಸಕ ಡಾ.ಎಸ್.ಪಿ.ರವೀಂದ್ರ, ನೇತ್ರಾಧಿಕಾರಿ ಕೆ.ಸಿ.ರಾಮು, ಬೆಳಗೆಟ್ಟ ಅರೋಗ್ಯ ನಿರೀಕ್ಷಣಾಧಿಕಾರಿ ಡಿ.ಮಹೇಶ್, ರವಿಕುಮಾರ್, ಲಕ್ಷ್ಮಿ, ರಮೇಶ್, ಉಪಸ್ಥಿತರಿದ್ದರು.

## ಪ್ರಮುಖ ಸುದ್ದಿ

# ಲಿಂಗಾಯತ ಮಹಾ ಅಧಿವೇಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ



» **ಚಿತ್ರದುರ್ಗ**

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ದಾವಣಗೆರೆ ಜಿಲ್ಲಾ ಘಟಕದಿಂದ ಡಿ.23 ಮತ್ತು 24 ರಂದು ದಾವಣಗೆರೆ ಎಂ.ಬಿ.ಎ.ಕಾಲೇಜು ಮೈದಾನದಲ್ಲಿ 24 ನೇ ಮಹಾ ಅಧಿವೇಶನ ನಡೆಯಲಿದೆ ಎಂದು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ಉಪಾಧ್ಯಕ್ಷ ಅಣಬೇರು ರಾಜಣ್ಣ ತಿಳಿಸಿದರು.

ಮಹಾ ಅಧಿವೇಶನಕ್ಕೆ ಸಂಬಂಧಿಸಿದಂತೆ ರೋಟರಿ ಬಾಲಭವನದಲ್ಲಿ ಮಂಗಳವಾರ ನಡೆದ ಪೂರ್ವಭಾವಿ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಣಬೇರು ರಾಜಣ್ಣ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪನವರ ಮುಂದಾಳತ್ವದಲ್ಲಿ ನಡೆಯಲಿರುವ ಎರಡು ದಿನಗಳ ಮಹಾ ಅಧಿವೇಶನದಲ್ಲಿ ವೀರಶೈವ–ಲಿಂಗಾಯತರು ನಾಡಿನ ಮೂಲೆ ಮೂಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಬಲ ತುಂಬಬೇಕಿದೆ ಎಂದು ಮನವಿ ಮಾಡಿದರು.

ಎರಡು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿರುವ 24 ನೇ ಮಹಾ ಅಧಿವೇಶನದಲ್ಲಿ ವೀರಶೈವ–ಲಿಂಗಾಯತರ ಅನೇಕ ಸಮಸ್ಯೆಗಳ ಕುರಿತು ಚರ್ಚಿಸಲಾಗುವುದು.


ಪುಟ ↘ 2





## ಫಾಸ್ಟ್ ನ್ಯೂಸ್

### ಲಿಂಗಾಯತ ಮಹಾ ಅಧಿವೇಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ

» ಮೊದಲ ಪುಟದಿಂದ

ಹಿಂದಿನಿಂದಲೂ ನಮಗೆ ಅನ್ಯಾಯವಾಗುತ್ತಿದೆ. ಒಳಪಂಗಡಗಳಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗುತ್ತಿರುವುದರಿಂದ ಕೇಂದ್ರ ಓ.ಬಿ.ಸಿ. ಪಟ್ಟಿಗೆ ಸೇರಿಸಬೇಕೆಂದು ಹೋರಾಟ ಮಾಡಿಕೊಂಡು ಬರುತ್ತಿದ್ದೇವೆ. ಒಳಜಗಳ ಬಿಟ್ಟು ಎಲ್ಲರೂ ಒಂದಾಗಬೇಕಿದೆ. ನನಗೆ ಪಕ್ಷ ಮುಖ್ಯವಲ್ಲ. ವೀರಶೈವ-ಲಿಂಗಾಯತರು ಮುಖ್ಯ ಎಂದು ಶಾಮನೂರು ಶಿವಶಂಕರಪ್ಪನವರು ಸ್ಪಷ್ಟವಾಗಿ ಹೇಳಿದ್ದಾರೆನ್ನುವುದನ್ನು ನೆನಪಿಸಿಕೊಂಡರು.

ಹೋರಾಟವಿದ್ದರೆ ಮಾತ್ರ ಆಳುವ ಸರ್ಕಾರಗಳು ಮಣಿಯುತ್ತವೆ. ಐದಾರು ವರ್ಷಗಳಲ್ಲಿ 2.50 ಲಕ್ಷ ಸದಸ್ಯರುಗಳು ನೊಂದಣಿಯಾಗಿದ್ದಾರೆ. ಎರಡು ದಿನಗಳ ಕಾಲ ನಡೆಯುವ ಮಹಾ ಅಧಿವೇಶನಕ್ಕೆ ಬರುವವರಿಗೆ ಯಾವುದೇ ತೊಂದರೆಯಾಗದಂತೆ ಊಟದ ವ್ಯವಸ್ಥೆ ಕಲ್ಪಿಸಿ ಬಸ್ ಸಂಚಾರ ಕೂಡ ಒದಗಿಸಲಾಗುವುದು. ರಾಜಕಾರಣಿಗಳು, ಸ್ವಾಮೀಜಿಗಳು, ಸಾಹಿತಿಗಳು ಮಹಾ ಅಧಿವೇಶನದಲ್ಲಿ ಭಾಗವಹಿಸಲಿದ್ದಾರೆ. ಅನೇಕ ವಿಚಾರಗೋಷ್ಠಿಗಳಿರುತ್ತವೆ ಎಂದು ಹೇಳಿದರು.

ಎಸ್.ವೀರೇಶ್, ಬೆಂಗಳೂರು ನಗರ ಯುವ ಘಟಕದ ಅಧ್ಯಕ್ಷ ಲಿಂಗರಾಜು, ಹೊಸದುರ್ಗ ಘಟಕದ ಅಧ್ಯಕ್ಷ ಓಂಕಾರಪ್ಪ, ನಗರ ಘಟಕದ ಅಧ್ಯಕ್ಷ ಆನಂದ್, ಮಹಿಳಾ ಘಟಕದ ಅಧ್ಯಕ್ಷೆ ರೀನಾ ವೀರಭದ್ರಪ್ಪ, ಕಾರ್ಯದರ್ಶಿ ಮಹೇಶ್, ವೀಣ ಸುರೇಶ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

### ಸಿದ್ದೇಶ್ವರ ದುರ್ಗ ಸ್ನೇಹಸಹ್ಯಾದ್ರಿ ವಿದ್ಯಾರ್ಥಿ ಸಂಘಟನೆಯಿಂದ ಉಚಿತ ನೇತ್ರ ಶಿಬಿರ ಡಿ.18ರಂದು.

» ಚಳ್ಳಕೆರೆ

ತಾಲ್ಲೂಕಿನಸಿದ್ದೇಶ್ವರನದುರ್ಗ 1993-94ನೇಸಾಲಿನ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳ ಸ್ನೇಹ ಸಹ್ಯಾದ್ರಿ ಸಂಘಟನೆವತಿಯಿಂದ ಶಿವಮೊಗ್ಗ ಶಂಕರಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಡಿ.18ರ ಸೋಮವಾರ ಬೆಳಗ್ಗೆ 9ಕ್ಕೆ ಉಚಿತ ನೇತ್ರಾ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಂಡಿದ್ದು ಕ್ಷೇತ್ರದ ಶಾಸಕ ಟಿ.ರಘುಮೂರ್ತಿ ಕಾರ್ಯಕ್ರಮವನ್ನು ಉದ್ಘಾಟಿಸುವರು ಎಂದು ವಿದ್ಯಾರ್ಥಿ ಸಂಘಟನೆ ತಿಳಿಸಿದೆ. ಉಚಿತ ನೇತ್ರಾ ಚಿಕಿತ್ಸೆ ಶಿಬಿರದಲ್ಲಿ ಪಾಲ್ಗೊಳ್ಳಲು ಬಯಸುವವರು ಎರಡು ಪಾಸ್‌ಪೋಟ್ ಪೋಟೋ, ರೇಷನ್ ಕಾರ್ಡ್, ಮತದಾನದ ಗುರುತಿನ ಚೀಟಿ, ಆಧಾರಕಾರ್ಡ್, ಮೊಬೈಲ್ ಸಂಖ್ಯೆ ಮುಂತಾದ ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಡಳಿತ ವೈದ್ಯಾಧಿಕಾರಿ ಡಾ.ಕೆ.ಎಸ್.ಶಿವರಾಜು, ಡಾ.ರಾಕೇಶ್, ಡಾ.ಶ್ರುತಿ, ನೇತ್ರಾಧಿಕಾರಿ ನವೀನ್‌ಕುಮಾರ್‌ರವರನ್ನು ಸಂಪರ್ಕಿಸಲು ಮನವಿ ಮಾಡಿದೆ.

### ಲೋಕ ಅದಾಲತ್‌ನಲ್ಲಿ ಜಿಲ್ಲಾ ಗ್ರಾಹಕರ ದೂರುಗಳು ಇತ್ಯರ್ಥ

» ದಾವಣಗೆರೆ

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಡಿಸೆಂಬರ್ 9 ರಂದು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ್‌ಅದಾಲತ್ ಜರುಗಿತು. ಅದಾಲತ್‌ನಲ್ಲಿ ಜಿಲ್ಲಾ ಗ್ರಾಹಕರ ದೂರುಗಳು, ಅಮಲ್ಜಾರಿ ದೂರುಗಳು ಹಾಗೂ ಕಡತಗಳ ರಾಜೀ ಸಂಧಾನ ಮುಖಾಂತರ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಯಿತು.

ಅದಾಲತ್‌ನಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಧೀಶರಾದ ರಾಜೇಶ್ವರಿ ಎನ್ ಹೆಗಡೆ, ಕಾನೂನು ಸೇವಾ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಧೀಶರಾದ ಮಹಾವೀರ್ ಎಂ.ಕರೆಣ್ಣನವರ್, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಮಹಂತೇಶ್ ಈರಪ್ಪ ಶಿಗ್ಲಿ ಉಪಸ್ಥಿತರಿದ್ದರು.

### ವಸತಿ ಶಾಲೆಗಳ 6ನೇ ತರಗತಿ ಪ್ರವೇಶ

» ದಾವಣಗೆರೆ

ಜಿಲ್ಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಅಂಬೇಡ್ಕರ್, ಇಂದಿರಾಗಾಂಧಿ ವಸತಿ ಶಾಲೆಗಳಿಗೆ 2024-2025ನೇ ಸಾಲಿನ 6ನೇ ತರಗತಿ ಪ್ರವೇಶ ಪರೀಕ್ಷೆಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪರಿಶಿಷ್ಟ ಜಾತಿ, ಪ.ಪಂಗಡ ಮತ್ತು ಹಿಂದುಳಿದ ವರ್ಗದ ಪ್ರವರ್ಗ 1ರ ವಿದ್ಯಾರ್ಥಿಗಳಿಗೆ ರೂ.2,50,000 ಮತ್ತು ಹಿಂದುಳಿದ ವರ್ಗ 2ಎ, 2ಬಿ, 3ಎ ಮತ್ತು 3ಬಿ ಗೆ ರೂ.1,00,000 ಗಳ ಕುಟುಂಬದ ವಾರ್ಷಿಕ ಆದಾಯ ಮಿತಿ ಇರಬೇಕು. ಪ್ರಸ್ತುತ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸಂಘದ ವ್ಯಾಪ್ತಿಯಲ್ಲಿರುವ ಶಾಲೆ ಅಥವಾ ಕಾಲೇಜುಗಳ ಮೂಲಕ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಬಹುದು ಅರ್ಜಿ ಸಲ್ಲಿಸಲು ಡಿ.31 ಕೊನೆಯ ದಿನವಾಗಿದೆ. 2024ರ ಫೆ.18 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಪ್ರವೇಶ ಪರೀಕ್ಷೆ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ನಾಗರಾಜ್. ಕೆ ತಿಳಿಸಿದ್ದಾರೆ.

---

### ಆಗ್ನೇಯ ಶಿಕ್ಷಕರ ಚುನಾವಣೆ

# ಪರಶುರಾಂಪುರದಲ್ಲಿ ಶ್ರೀನಿವಾಸ್ ಪ್ರಚಾರ

» ಪರಶುರಾಂಪುರ

ವಿಧಾನ ಪರಿಷತ್ತಿನ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಇನ್ನೂ ಆರೇಳು ತಿಂಗಳು ಬಾಕಿ ಇರುವಾಗ ಚಳ್ಳಕೆರೆ ತಾಲೂಕಿನ ಪರಶುರಾಂಪುರ ಹೋಬಳಿಯಲ್ಲಿ ಮಂಗಳವಾರ ಕಾಂಗ್ರೆಸ್ ನಿಯೋಜಿತ ಅಭ್ಯರ್ಥಿ ಡಿ.ಟಿ.ಶ್ರೀನಿವಾಸ್ ಪರಶುರಾಂಪುರ ಹೋಬಳಿಯ ವಿವಿಧ ಶಾಲೆಗಳಿಗೆ ಭೇಟಿ ನೀಡಿ ಪ್ರಚಾರ ಆರಂಭಿಸಿದರು.

ಕಾಂಗ್ರೆಸ್ ಪಕ್ಷದ ವತಿಯಿಂದ ಅಭ್ಯರ್ಥಿಯನ್ನು ಅಂತಿಮಗೊಳಿಸಿದ್ದರಿಂದ ಈಗಾಗಲೇ ಚುನಾವಣೆ ಪ್ರಚಾರ ಬಿಸಿ ಹೆಚ್ಚಾಗಿದೆ. ಗ್ರಾಮದ ವೇದಾವತಿ , ಸರ್ವೋದಯ , ಸರ್ಕಾರಿ ಪ್ರೌಢಶಾಲೆ , ಪದವಿ ಪೂರ್ವ ಕಾಲೇಜು, ವಿಶ್ವ ಭಾರತಿ , ಪದವಿ ಕಾಲೇಜು ಸೇರಿದಂತೆ ವಿವಿಧ ಶಾಲೆಗಳಿಗೆ ತೆರಳಿ ಮತಯಾಚಿಸಿದರು.

ಆಗ್ನೇಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಗೆ ತುಮಕೂರು, ಚಿತ್ರದುರ್ಗ, ದಾವಣಗೆರೆ,



ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳು ಬರಲಿವೆ. ಶಿಕ್ಷಣ ಸಂಸ್ಥೆ ನಡೆಸುತ್ತಾ ಬಂದಿದ್ದು, ಶಿಕ್ಷಕರ ಕಷ್ಟ ಸುಖಗಳನ್ನು ಅರಿತಿದ್ದೇನೆ. ಸ್ಪಂದಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಒಂದು ಅವಕಾಶ ಕಲ್ಪಿಸಲು ಮನವಿ ಮಾಡಿದರು .ಆಗೆಯೇ ಶಿಕ್ಷಕರ ಮತದಾರರು ಈ ಬಾರಿ ಬದಲಾವಣೆ ಬಯಸಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ನಿಯೋಜಿತ ಅಭ್ಯರ್ಥಿ ಡಿ.ಟಿ.ಶ್ರೀನಿವಾಸ್ ತಿಳಿಸಿದರು.

ಕಳೆದ ಬಾರಿ ಆಗ್ನೇಯ ಪದವೀಧರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದೇನೆ. ಕ್ಷೇತ್ರ ದೊಡ್ಡದಿದ್ದ ಕಾರಣ ಮತದಾರರನ್ನು ತಲುಪಲು ಸಾಧ್ಯವಾಗಲಿಲ್ಲ. ಈ ಬಾರಿ ಶಿಕ್ಷಕರು ಮತದಾರರಾಗಿದ್ದು, ಸಂಖ್ಯೆ ಕಡಿಮೆ ಇದೆ. ಹಾಗಾಗಿ ಶಿಕ್ಷಕರನ್ನು ನೇರವಾಗಿ ಭೇಟಿಯಾಗಿ ಮತ ಕೇಳುತ್ತೇನೆ. ಈಗಾಗಲೇ ಪ್ರವಾಸ ಆರಂಭಿಸಿರುವುದರಿಂದ ಈ ಬಾರಿ ಸಹಕಾರಿಯಾಗಲಿದೆ ಎಂದು ಮಾಹಿತಿ ನೀಡಿದರು.ಸಂದರ್ಭದಲ್ಲಿ ನಗರಸಭೆ ಸದಸ್ಯ ರಮೇಶ ಗೌಡ , ಪರಶುರಾಂಪುರ ಬ್ಲಾಕ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಶಶಿಧರ , ಕಸಾಪ ತಾಲೂಕಾಧ್ಯಕ್ಷ ವೀರಭದ್ರಪ್ಪ , ಶಫರ್ಡ್ ಇಂಡಿಯಾ ಇಂಟರ್ನ್ಯಾಷನಲ್ ತಾಲೂ□□□ಧ್ಯಕ್ಷರು ಮಧು ಕುಮಾರ್ ಎಂ ಎನ್ ಮುಖಂಡರಾದ ಚಿಕ್ಕಣ್ಣ , ಮಂಜುನಾಥ , ಪೋತರಾಜ ಇದ್ದರು.

---

### ಆಗ್ನೇಯ ಪದವೀಧರ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಡಿ.ಟಿ.ಶ್ರೀನಿವಾಸ್ ಸ್ಪರ್ಧೆ

# ಗೆಲಿಸಿಕೊಡುವಂತೆ ನೇತಾರರಲಿ ಮನವಿ

» ಚಳ್ಳಕೆರೆ

ಇನ್ನೂ ಕೆಲವೇ ತಿಂಗಳಲ್ಲಿ ಆಗ್ನೇಯ ಪದವೀಧರ ಶಿಕ್ಷಕರ ಕ್ಷೇತ್ರದಕ್ಕೆ ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ ಪಕ್ಷ ಈಗಾಗಲೇ ಚುನಾವಣಾ ಸಿದ್ದತೆ ಹಾಗೂ ಅಭ್ಯರ್ಥಿಗಳನ್ನು ಗುರುತಿಸುವ ಕಾರ್ಯ ನಡೆಸುತ್ತಿದೆ. ಈ ಚುನಾವಣೆಯಲ್ಲೂ ಸಹ ಪಕ್ಷ ನಿರ್ಧರಿಸಿದ ವ್ಯಕ್ತಿಗೆ ಮತ ನೀಡಿ ಜಯಶಾಲಿಯಾಗುವಂತೆ ಮಾಡಬೇಕೆಂದು ಬ್ಲಾಕ್ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಪಿ.ತಿಪ್ಪೇಸ್ವಾಮಿ ತಿಳಿಸಿದರು.

ಅವರು, ಮಂಗಳವಾರ ಶಾಸಕರ ಭವನಕ್ಕೆ ಆಗಮಿಸಿದ್ದ ಹಿರಿಯೂರು ಕ್ಷೇತ್ರದ ಮಾಜಿ ಶಾಸಕಿ ಪೂರ್ಣಿಮಾರವರ ಪತಿ ಡಿ.ಟಿ.ಶ್ರೀನಿವಾಸ್‌ರವರನ್ನು ಸನ್ಮಾನಿಸಿ ಮಾತನಾಡಿದರು. ಪ್ರಸ್ತುತ ಡಿ.ಟಿ.ಶ್ರೀನಿವಾಸ್ ಈಗಾಗಲೇ ಈ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಆಗ್ನೇಯ ಪದವಿ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧೆ ಬಯಸಿದ್ದಾರೆ. ಪಕ್ಷದ ವರಿಷ್ಠರ ಮಂಡಳಿಯೂ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಂಡಿದೆ. ಪಕ್ಷ ಶ್ರೀನಿವಾಸ್‌ರವರನ್ನು ಅಧಿಕೃತ ಅಭ್ಯರ್ಥಿಯನ್ನಾಗಿಸಿದರೆ ನಾವೆಲ್ಲರೂ ಅವರ ವಿಜಯಕ್ಕಾಗಿ ದುಡಿಯೋಣವೆಂದರು.

ಕಾಂಗ್ರೆಸ್ ಮುಖಂಡ ಡಿ.ಟಿ.ಶ್ರೀನಿವಾಸ್ ಮಾತನಾಡಿ, ಕಳೆದ ಬಾರಿ ಈ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಾನು ಸ್ಪರ್ಧಿಸಿದ್ದು,




ಕ್ಷೇತ್ರದ ಪದವೀಧರ ಶಿಕ್ಷಕರ ಮತದಾರರ ಬಗ್ಗೆ ಸ್ಪಷ್ಟ ಮಾಹಿತಿ ಇದೆ. ಮತ್ತೊಮ್ಮೆ ನಾನು ಸ್ಪರ್ಧಿಸಬೇಕೆಂಬ ಇಂಗಿತವನ್ನು ಮತದಾರರು ವ್ಯಕ್ತಪಡಿಸಿದ್ಧಾರೆ.

ನಾನು ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿಕೊಂಡಿವೆ. ಪ್ರಸ್ತುತ ಸ್ಥಿತಿಯಲ್ಲಿ ಈ ಕ್ಷೇತ್ರದಿಂದ ಅಂತಿಮವಾಗಿ ನನಗೆ ಪಕ್ಷ ಅವಕಾಶ ಮಾಡಿಕೊಡಲಿದೆ ಎಂಬ ನಂಬಿಕೆ ನನಗಿದೆ. ತಾವೆಲ್ಲರೂ ಸಹಕಾರ ನೀಡಿ ನನ್ನ ಗೆಲುವಿಗೆ ಶ್ರಮಿಸುವಂತೆ ಮನವಿ ಮಾಡಿದರು.

ಪರಶುರಾಮಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಶಿಧರ, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಜೆ.ರಾಘವೇಂದ್ರ, ಸದಸ್ಯರಾದ ವೈ.ಪ್ರಕಾಶ್, ಬಿ.ಟಿ.ರಮೇಶ್‌ಗೌಡ, ಕುಶಲಕರ್ಮಿ ರಾಜ್ಯಾಧ್ಯಕ್ಷ ಆರ್.ಪ್ರಸನ್ನಕುಮಾರ್, ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಎಚ್.ಎಚ್.ಸೈಯದ್, ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅನ್ವರ್ ಮಾಸ್ಟರ್, ಮಾಜಿ ಪುರಸಭಾ ಸದಸ್ಯ ಗೋವಿಂದರಾಜು, ಕಾಂಗ್ರೆಸ್ ಮುಖಂಡರಾದ ಸಿ.ಟಿ.ಶ್ರೀನಿವಾಸ್, ಕೃಷ್ಣಮೂರ್ತಿ, ಪ್ರಹ್ಲಾದ್, ಜಿ.ಟಿ.ವೀರಭದ್ರಸ್ವಾಮಿ, ಸಿ.ಟಿ.ವೀರೇಶ್, ದಳವಾಯಿಮೂರ್ತಿ, ಟಿ.ಸೂರನಾಯಕ, ಚೇತನ್‌ಕುಮಾರ್, ಬೋರಣ್ಣ, ಭದ್ರಿ, ನಟರಾಜು, ಗುರುಮೂರ್ತಿ, ಅಪ್ಪಣ್ಣ ಮುಂತಾದವರು ಉಪಸ್ಥಿತರಿದ್ದರು.

---

# ಅವೈಜ್ಞಾನಿಕ ರಸ್ತೆ ವಿಭಜಕ ಕುರಿತು ಸದನದಲ್ಲಿ ಚರ್ಚೆ: ತೆರವಿಗೆ ಶಾಸಕ ಒತ್ತಾಯ



» ಬೆಳಗಾವಿ

ಸುವರ್ಣಸೌಧ: ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಚಿತ್ರದುರ್ಗ ನಗರದ ಪ್ರಮುಖ ರಸ್ತೆಗಳಲ್ಲಿ ನಿರ್ಮಿಸಲಾಗಿರುವ ಅವೈಜ್ಞಾನಿಕ ರಸ್ತೆ ವಿಭಜಕಗಳ ಕುರಿತು ಚರ್ಚೆ ನಡೆಯಿತು. ಮಂಗಳವಾರದ



ವಿಧಾನ ಸಭಾ ಕಲಾಪದಲ್ಲಿ ಶಾಸಕ ವೀರೇಂದ್ರ ಪಪ್ಪಿ ಈ ಕುರಿತು ಪ್ರಶ್ನಿಸಿ, ಸರ್ಕಾರದ ಗಮನ ಸೆಳೆದರು. ಐತಿಹಾಸಿಕವಾಗಿರುವ ಚಿತ್ರದುರ್ಗ ನಗರದಲ್ಲಿ ಮೊದಲಿನಿಂದಲೂ ಚಿಕ್ಕ ರಸ್ತೆಗಳು ಇವೆ. ನಗರದ ಮುಖ್ಯ ರಸ್ತೆ ಕೇವಲ 40 ಅಡಿ ಅಗಲವಿದೆ. ಇದರ ಮಧ್ಯ 5 ಎತ್ತರ ಹಾಗೂ 4 ಅಡಿ ಅಗಲದ ರಸ್ತೆ ವಿಭಜಕಗಳನ್ನು ನಿರ್ಮಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರು, ಪಾದಚಾರಿಗಳು, ವ್ಯಾಪಾರಿಗಳು ಬವಣೆ ಪಡುವಂತೆಯಾಗಿದೆ. ರಸ್ತೆ ಅಪಘಾತಗಳು ಹೆಚ್ಚಾಗುತ್ತಿವೆ ಎಂದರು. ಕೆ.ಎಸ್.ಆರ್.ಟಿ. ಬಸ್ ನಿಲ್ದಾಣದಿಂದ ಗಾಂಧಿ ವೃತ್ತ ಸಂಪರ್ಕಿಸುವ ರಸ್ತೆ ಕಳೆದ 35 ವರ್ಷಗಳಿಂದ ಏಕಮುಖ ಸಂಚಾರದ ರಸ್ತೆಯಾಗಿದೆ. ಕಿರಿದಾದ ಏಕಮುಖ ರಸ್ತೆಯಲ್ಲೂ ದೊಡ್ಡ ರಸ್ತೆ ವಿಭಜಕಗಳನ್ನು ನಿರ್ಮಿಸಿರುವುದರಿಂದ ಕೇವಲ 10 ರಿಂದ 12 ಅಡಿ ರಸ್ತೆಗಳು ನಿರ್ಮಾಣವಾಗಿ, ಬಸ್ ಸೇರಿದಂತೆ ಇತರೆ ಭಾರಿ ವಾಹನಗಳು ಸಂಚಾರಕ್ಕೆ ತೊಂದರೆಯಾಗಿದೆ. ಇಲ್ಲಿ ಸಂಚರಿಸುವ ಪಾದಚಾರಿಗಳಿಗೆ ಕಷ್ಟವಾಗಿದೆ. ನಗರವಾಸಿಗಳು ಹಾಗೂ ನಗರಕ್ಕೆ ಆಗಮಿಸುವ ಜನರು ಸಹ ರಸ್ತೆ ವಿಭಜಕಗಳ ತೆರವಿಗೆ ಆಗ್ರಹಿಸುತ್ತಿದ್ದಾರೆ. ವೈಯಕ್ತಿಕವಾಗಿ ಸ್ವತಃ ರಸ್ತೆ ವಿಭಜಕಗಳ ಪರೀಶಲನೆ ನೆಡೆಸಿದ್ದೇನೆ. ತುರ್ತಾಗಿ ರಸ್ತೆ ವಿಭಜಕಗಳನ್ನು ತೆರವು ಆಗಬೇಕಿದೆ ಎಂದು ಸರ್ಕಾರವನ್ನು ಒತ್ತಾಯಿಸಿದರು.ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಪರವಾಗಿ ಸದನದಲ್ಲಿ ಉತ್ತರಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ, ಅವೈಜ್ಞಾನಿಕ ರಸೆ ವಿಭಜಕ ನಿರ್ಮಿಸಿದ ಗುತ್ತಿದಾರ ಬಿಲ್‌ಗಳನ್ನು ಸರ್ಕಾರ ಈಗಾಗಲೇ ತಡೆಹಿಡಿದೆ. ವಿಭಜಕಗಳ ತೆರವಿನ ಕುರಿತು ಮುಖ್ಯಮಂತ್ರಿ ಹಾಗೂ ಸಂಬಂಧಪಟ್ಟ ಸಚಿವರ ಗಮನಕ್ಕೆ ತರುವುದಾಗಿ ಹೇಳಿದರು.

---

# ಇಸ್ರೇಲ್-ಹಮಾಸ್ ಯುದ್ದ ನಿಂತು ಶಾಂತಿ ನೆಲೆಸುವಂತಾಗಲಿ ಎಂದು ಯುನೈಟೆಡ್ ಕ್ರಿಶ್ಚಿಯನ್ ಫೋರಂ ಯೂಮನ್ ರೈಟ್ಸ್‌ನಿಂದ ಪ್ರಾರ್ಥನೆ

» ಚಿತ್ರದುರ್ಗ

ಇಸ್ರೇಲ್-ಹಮಾಸ್ ನಡುವೆ ನಡೆಯುತ್ತಿರುವ ಯುದ್ಧ ಕೊನೆಗೊಂಡು ಶಾಂತಿ ನೆಲೆಸಲಿ ಎಂದು ಯುನೈಟೆಡ್ ಕ್ರಿಶ್ಚಿಯನ್ ಫೋರಂ ಯೂಮನ್ ರೈಟ್ಸ್‌ನಿಂದ ಪ್ರವಾಸಿ ಮಂದಿರದಲ್ಲಿ ಸೋಮವಾರ ಪ್ರಾರ್ಥನೆ ಸಲ್ಲಿಸಲಾಯಿತು.

ಯುದ್ದದಿಂದ ಮಹಿಳೆಯರ ಮಾನಭಂಗ, ಪುಟ್ಟ ಮಕ್ಕಳ ಹತ್ಯೆ ಕ್ಷಮಿಸಲಾಗದು. ದಯಾಮಯನಾದ ಏಸು ಅಲ್ಲಿನ ಉಗ್ರರ ಮನಸ್ಸು ಪರಿವರ್ತನೆಗೊಳಿಸಲಿ. ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ಅಮಾಯಕರು, ಮುಗ್ದರು, ಶೋಷಣೆಗೊಳಗಾಗುತ್ತಿದ್ದಾರೆ. ವಿಶ್ವಸಂಸ್ಥೆ ಬಿಗಿ ನಿಲುವು ತಾಳಿ ಇಸ್ರೇಲ್-ಹಮಾಸ್ ಯುದ್ದ ವನ್ನು ನಿಲ್ಲಿಸಬೇಕು. ಚಿಕ್ಕ ರಾಷ್ಟ್ರ ಇಸ್ರೇಲ್ ಶಕ್ತಿಶಾಲಿಯಾಗಿ ಬೆಳೆದಿರುವುದರಿಂದ ಹಮಾಸ್



ಉಗ್ರರಿಗೆ ಪ್ರತ್ಯುತ್ತರ ನೀಡುತ್ತಿದೆ. ಆದರೂ ಯುದ್ದ ಎಂದ ಮೇಲೆ ಏನು ಅರಿಯದ ಮುಗ್ದರ ಜೀವ ಹರಣವಾಗುತ್ತದೆ. ಶಾಂತಿಧೂತನಾದ ಏಸು ಯುದ್ದವನ್ನು ಅಂತ್ಯಗೊಳಿಸಿ ನೆಮ್ಮದಿ ನೆಲೆಸುವಂತೆ ಪ್ರೇರೇಪಿಸಲಿ ಎಂದು ಪ್ರಾರ್ಥಿಸಲಾಯಿತು.

ಯುನೈಟೆಡ್ ಕ್ರಿಶ್ಚಿಯನ್ ಫೋರಂ ಯೂಮನ್ ರೈಟ್ಸ್ ಜಿಲ್ಲಾಧ್ಯಕ್ಷ ಫಾದರ್ ಸಜ್ಜಿಜಾರ್ಜ್, ಪ್ರಧಾನ ಕಾರ್ಯದರ್ಶಿ ರೆವೆರಂಡ್ ಫಾದರ್ ಎಂ.ಎಸ್. ರಾಜು ಇನ್ನು ಮೊದಲಾದವರು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

---

## ಪ್ರಮುಖ ಸುದ್ದಿ

# ಕರ್ನಾಟಕ ಏಕೀಕರಣ ಚಳವಳಿ: ವಿಚಾರ ಸಂಕಿರಣ

» ಪರಶುರಾಂಪುರ

ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಪಾತ್ರಗಾರ ಇಲಾಖೆ ಬೆಂಗಳೂರು ಇವರು ಸಹಯೋಗದೊಂದಿಗೆ ಕರ್ನಾಟಕ ಏಕೀಕರಣ ಚಳವಳಿ : ಸಮಾಕಾಲೀನತೆ ಮತ್ತು ಸವಾಲುಗಳು ಎಂಬುದರ ಬಗ್ಗೆ ಡಿ.14ರಿಂದ 15ರ ತನಕ ಎರಡು ದಿನಗಳ ಕಾಲ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮವನ್ನ ಏರ್ಪಡಿಸಲಾಗಿದೆ.

ಸಮಾರಂಭವನ್ನು ಶಾಸಕ ಟಿ.ರಘುಮೂರ್ತಿ ಉದ್ಘಾಟಿಸುವರು . ಪ್ರಾಂಶುಪಾಲ ಧನಂಜಯ ಅಧ್ಯಕ್ಷತೆ ವಹಿಸುವರು.ಡಾ.ಪಲಾಟಿ ವೆಂಕಟರಾವ್ ಮಾರುತಿರಾವ್ ಆಶಯ ನುಡಿಗಳನ್ನ ತಿಳಿಸುವರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಪಾತ್ರಗಾರ ಇಲಾಖೆಯ ನಿರ್ದೇಶಕ ಡಾ.ಗವಿಸಿದ್ದಯ್ಯ , ಉಪ ನಿರ್ದೇಶಕ ಡಾ.ನೆಲ್ಕುದ್ರಿ ಸದಾನಂದಪ್ಪ , ದಾವಣಗೆರೆ ವಿವಿಯ ಎನ್ನ ಎಸ್ ಎಸ್ ಸಂಯೋಜನಾಧಿಕಾರಿ ಡಾ.ಅಶೋಕ್




ಕುಮಾರ್ ವೀ.ಪಾಳೇದ , ಕಾಲೇಜಿನ ಐಕ್ಯೂಎಸಿ ಸಂಚಾಲಕ ಹಲಸಂಗಿ ಸತೀಶ್ , ಕು.ಶರಾಜ್ ಬಾನು , ಪ್ರಾಧ್ಯಾಪಕ ,ಎನ್ ಎಸ್ ಎಸ್ ಕಾರ್ಯಕ್ರಮಾಧಿಕಾರಿ ಡಾ.ತಿಪ್ಪೇರುದ್ರ ಪ್ರಾಸ್ತಾವಿಕ ನುಡಿ ತಿಳಿಸುವರು.

ಕರ್ನಾಟಕ ಏಕೀಕರಣ ಚಳವಳಿ -ಹೆಜ್ಜೆ ಗುರುತುಗಳು ಬಗ್ಗೆ ಮೊದಲ ಗೋಷ್ಠಿಯು ತುಮಕೂರು ವಿವಿಯ ಇತಿಹಾಸ ವಿಭಾಗದ ಸಹ ಪ್ರಾಧ್ಯಾಪಕ ಡಾ.ಟಿ.ಎನ್ ಹರಿಪ್ರಸಾದ್ ಇವರ ಅಧ್ಯಕ್ಷತೆಯಲ್ಲಿ ನಡೆಯುವುದು.ಸಂಪನ್ಮೂಲ ವ್ಯಕ್ತಿಗಳಾಗಿ ಕ.ಸಾ.ಪ ಜಿಲ್ಲಾಧ್ಯಕ್ಷ ಡಾ .ನಿಷ್ಕಿ ರುದ್ರಪ್ಪ , ಬಾಗಲಕೋಟೆ ಜಿಲ್ಲೆಯ ಪ್ರ.ದ.ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಲಕ್ಷ್ಮೀಕಾಂತ ಪಂಚಾಳ , ಶ್ರೀ ಕೃಷ್ಣದೇವರಾಯ ವಿವಿಯ ಸಹ ಪ್ರಾಧ್ಯಾಪಕ ಡಾ.ಹೆಚ್ ತಿಪ್ಪೇಸ್ವಾಮಿ , ಸೇರಿದಂತೆ ಕಾಲೇಜಿನ ಲೆ.ಡಾ.ರವಿಕುಮಾರ್ ,ವೈ ಲಿಂಗೇಶ್ವರ , ಡಾ.ಸತೀಶ್ ಉಪಸ್ಥಿತರಿರುವರು.

ಕರ್ನಾಟಕ ಏಕೀಕರಣ ಚಳವಳಿ -ಪ್ರಾದೇಶಿಕತೆ ಬಗ್ಗೆ ಇರುವ ಎರಡೇ ಗೋಷ್ಠಿಯು ದಾವಣಗೆರೆ ವಿವಿಯ ಕನ್ನಡ ಪ್ರಾಧ್ಯಾಪಕರ ವೇದಿಕೆ ಅಧ್ಯಕ್ಷ ಪ್ರೋ .ಜಿ.ಎನ್ ಬಸವರಾಜಪ್ಪ , ಸಂಪನ್ಮೂಲ ವ್ಯಕ್ತಿಗಳಾಗಿ ಕರ್ನಾಟಕ ರಾಜ್ಯ ಪಾತ್ರಗಾರ ಇಲಾಖೆಯ ಹಿರಿಯ ನಿರ್ದೇಶಕ ಡಾ.ವೀರಶೆಟ್ಟಿ ಗಾರಂಪಳ್ಳಿ , ದಾವಣಗೆರೆ ವಿವಿಯ ಇತಿಹಾಸ ಅಧ್ಯಾಪಕರ ವೇದಿಕೆ ಅಧ್ಯಕ್ಷ ಡಿ.ಜೆ.ಕೆ ಮಲ್ಲಿಕಾರ್ಜುನ, ಚಳ್ಳಕೆರೆ ಬಾಪೂಜಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಜಿ.ವಿ ರಾಜಣ್ಣ , ಕೆ.ಪ್ರೇಮ್ ಕುಮಾರ್ , ಡಾ.ಗೌಡಪ್ಪ , ಕಲಾವತಿ ಪಾಲ್ಗೊಳ್ಳುವರು.

ಸಂಶೋಧನಾ ಮಂಡನೆಯ ಮೂರನೇ ಗೋಷ್ಠಿಯಲ್ಲಿ ಚಿತ್ರದುರ್ಗ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಬಿ.ಸುರೇಶ್ ಅಧ್ಯಕ್ಷತೆ ವಹಿಸುವರು.ಶ್ರೀನಿವಾಸ ಟಿ.ಕೆ , ನರಸಿಂಹಮೂರ್ತಿ , ಸಂದೀಪ್ , ಕರಿಯಣ್ಣ ಇರುವರು.ಹಾವೇರಿ ಜಿಲ್ಲೆಯ ಡಾ .ಕಾಂತೇಶ ರೆಡ್ಡಿ ಗುಡಿಹಾಳ ಇವರಿಂದ ಕನ್ನಡ ಗೀತೆಗಳ ಕಾರ್ಯಕ್ರಮ ಆಯೋಜಿಸಲಾಗಿದೆ.

ಡಿ.15 ಶುಕ್ರವಾರ ಕರ್ನಾಟಕ ಏಕೀಕರಣ ಚಳವಳಿ - ಸಾಹಿತ್ಯ, ಸಂಘ ಸಂಸ್ಥೆ ಮತ್ತು ಪತ್ರಿಕೆಗಳು ಎಂಬ ನಾಲ್ಕನೇ ಗೋಷ್ಠಿಯಲ್ಲಿ ಕೈ.ಸ.ಪಾ ಜಿಲ್ಲಾಧ್ಯಕ್ಷ ಕೆ.ಎಂ ಶಿವಸ್ವಾಮಿ ಅಧ್ಯಕ್ಷೆ ವಹಿಸುವರು.ಸಂಪನ್ಮೂಲ ವ್ಯಕ್ತಿಗಳಾಗಿ ಅಕ್ಕಲಕೋಟ ಕಾಲೇಜಿನ ಪ್ರಾಧ್ಯಾಪಕ ಡಾ.ಗುರಲಿಂಗಪ್ಪ ಧಬಾಲೆ , ಆಂಧ್ರಪ್ರದೇಶ ಕ.ಸ.ಪ ಘಟಕದ ಅಧ್ಯಕ್ಷ ಅಂಜನ್ ಕುಮಾರ್ , ಪತ್ರಕರ್ತ ಕೋರ್ಲಕುಂಟೆ ತಿಪ್ಪೇಸ್ವಾಮಿ , ಬಿ.ಟಿ ಭರತ್ , ಶಿವಶಂಕರ್ ಬಿ.ಎನ್ , ಪುರುಷೋತ್ತಮ ಇರುವರು.ಸಮಾರೋಪ ಸಮಾರಂಭದಲ್ಲಿ ಪ್ರಾಂಶುಪಾಲ ಪ್ರೊ ಧನಂಜಯ , ಆಂಧ್ರ ಗಡಿನಾಡು ಕ.ಸ.ಪ ಘಟಕದ ಮಾಜಿ ಅಧ್ಯಕ್ಷ ಹೆಚ್ ರಾಮಚಂದ್ರಪ್ಪ , ಮೊಹಮ್ಮದ್ ಸಾದತ್ , ಶರತ್ ಬಾಬು , ನಾಗಮಣಿ , ಲೋಕೇಶ್ವರ ಭಾಗವಹಿಸುವರು.

## ಫಾಸ್ಟ್ ನ್ಯೂಸ್

### ದಿಶಾ ಸಮಿತಿ ಸಭೆ

» **ಚಿತ್ರದುರ್ಗ**

ಕೇಂದ್ರ ಪುರಸ್ಕೃತ ಯೋಜನೆಗಳ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆ ಡಿ. 15 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣದಲ್ಲಿ ನಡೆಯಲಿದೆ. ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವರು ಹಾಗೂ ಸಂಸದರಾದ ಎ. ನಾರಾಯಣಸ್ವಾಮಿ ಅವರು ವಹಿಸುವರು. ಸಭೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಆಗಸ್ಟ್ 2023 ರಿಂದ ಅಕ್ಟೋಬರ್ 2023 ರವರೆಗಿನ ಅವಧಿಯ ಪ್ರಗತಿ ಪರಿಶೀಲನೆ ನಡೆಯಲಿದೆ ಎಂದು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸೋಮಶೇಖರ್ ಅವರು ತಿಳಿಸಿದ್ದಾರೆ.

### ಇ-ಶ್ರಮ್ ಪೋರ್ಟಲ್‌ನಲ್ಲಿ ವಿದ್ಯುತ್ ಮಗ್ಗ ನೇಕಾರರ ನೋಂದಣಿಗೆ ಮನವಿ

» **ಚಿತ್ರದುರ್ಗ**

ಕೇಂದ್ರ ಸರ್ಕಾರವು ಅಭಿವೃದ್ಧಿ ಪಡಿಸಿರುವ ಇ–ಶ್ರಮ್ ಪೋರ್ಟಲ್‌ನಲ್ಲಿ ಕೈಮಗ್ಗ, ವಿದ್ಯುತ್ ಮಗ್ಗ ನೇಕಾರರು ಇದೇ ಡಿಸೆಂಬರ್ 25ರೊಳಗೆ ನೋಂದಣಿ ಮಾಡಿಕೊಳ್ಳಬೇಕು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕರು ಕೋರಿದ್ದಾರೆ. ಕೇಂದ್ರ ಸರ್ಕಾರವು ಸುಮಾರು 379 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಇ–ಶ್ರಮ್ ಪೋರ್ಟಲ್‌ನಲ್ಲಿ ಅಳವಡಿಸುವಂತೆ ತಿಳಿಸಲಾಗಿರುತ್ತದೆ. ಈ 379 ವರ್ಗಗಳ ಪೈಕಿ ನೇಕಾರರನ್ನು ಸಹ ಇ–ಶ್ರಮ್ ಪೋರ್ಟಲ್‌ನಲ್ಲಿ ನೊಂದಾಯಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ತಿಳಿಸಲಾಗಿದೆ. ಈ ನೋಂದಣಿಯ ಉದ್ದೇಶವು ನೇಕಾರರಿಗೆ, ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು, ನೇಕಾರ, ಕಾರ್ಮಿಕರಿಗೆ ವಿಶೇಷ ನೀತಿಗಳು ಹಾಗೂ ಯೋಜನೆಗಳನ್ನು ರೂಪಿಸಲು ಅನುಕೂಲವಾಗಲು, ಮರಣ ಹೊಂದಿದಲ್ಲಿ ಪರಿಹಾರ, ಸಹಾಯಧನ ನೀಡಲು ಅನುಕೂಲವಾಗುವ ದೃಷ್ಠಿಯಿಂದ ನೇಕಾರರನ್ನು ಇ–ಶ್ರಮ್ ಪೋರ್ಟಲ್‌ನಲ್ಲಿ ಅಳವಡಿಸುವುದು ಅವಶ್ಯಕತೆ ಇರುತ್ತದೆ. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 16 ರಿಂದ 59 ವಯಸ್ಸಿನ ಕೈಮಗ್ಗ, ವಿದ್ಯುತ್ ಮಗ್ಗ ನೇಕಾರರು ಇ–ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿಸಲು ಅರ್ಹರಿರುತ್ತಾರೆ. ಆದ್ದರಿಂದ ಅರ್ಹ ಕೈಮಗ್ಗ, ವಿದ್ಯುತ್ ಮಗ್ಗ ನೇಕಾರರು ಆಧಾರ್ ಕಾರ್ಡ್, ಆಧಾರ್ ಸಂಖ್ಯೆಗೆ ಜೋಡಣೆಯಾದ ಮೊಬೈಲ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆ ವಿವರಗಳೊಂದಿಗೆ ಹತ್ತಿರದ ಸಾಮಾನ್ಯ ಸೇವಾ ಕೇಂದ್ರ, ಬಾಪೂಜಿ ಸೇವಾ ಕೇಂದ್ರಗಳು, ಅಂಚೆ ಕಚೇರಿಗಳು, ಕರ್ನಾಟಕ–1, ಬೆಂಗಳೂರು–1 ಹಾಗೂ ಗ್ರಾಮ–1 ಗಳಿಗೆ ಭೇಟಿ ನೀಡಿ ಡಿಸೆಂಬರ್ 25ರೊಳಗಾಗಿ ನೋಂದಣಿ ಮಾಡಿಕೊಳ್ಳಲು ಕೋರಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂರವಾಣಿ ಸಂಖ್ಯೆ 08194–221426ಗೆ ಸಂಪರ್ಕಿಸಬಹುದು ಎಂದು ಕೈಮಗ್ಗ ಮತ್ತು ಜವಳಿ ಉಪನಿರ್ದೇಶಕರು ತಿಳಿಸಿದ್ದಾರೆ.

### ಡಿ.13ರಂದು ಜಿಲ್ಲಾಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆ: ಅರ್ಜಿ ಆಹ್ವಾನ

» **ಚಿತ್ರದುರ್ಗ**

ಅಂತರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಮೇಳ–2024ರ ಅಂಗವಾಗಿ ರಾಜ್ಯಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯ ಪೂರ್ವಭಾವಿಯಾಗಿ ಜಿಲ್ಲಮಟ್ಟದಲ್ಲಿ ಸಿರಿಧಾನ್ಯ ಪಾಕ ಸ್ಪರ್ಧೆಯನ್ನು ಕೃಷಿ ಇಲಾಖೆಯಿಂದ ಡಿಸೆಂಬರ್ 13ರಂದು ಬೆಳಿಗ್ಗೆ 11ಕ್ಕೆ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಏರ್ಪಡಿಸಲಾಗಿದ್ದು, ಈ ಸಂಬಂಧ ಅರ್ಜಿ ಆಹ್ವಾನಿಸಲಾಗಿದೆ.

ಸ್ಪರ್ಧೆಯಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಭಾಗವಹಿಸಲು ಅವಕಾಶವಿರುತ್ತದೆ. ಅಭ್ಯರ್ಥಿಗಳು ತಮ್ಮ ಭಾವಚಿತ್ರದೊಂದಿಗೆ ಹೆಸರು, ವಿಳಾಸ ಮತ್ತು ತಯಾರಿಸುವ ಖಾದ್ಯ, ಬೇಕಾಗುವ ಸಾಮಾಗ್ರಿಗಳು, ತಯಾರಿಸಲು ಬೇಕಾಗುವ ಸಮಯ ಹಾಗೂ ತಯಾರಿಸುವವಿಧಾನದಸಂಕ್ಷಿಪ್ತಮಾಹಿತಿಯೊಂದಿಗೆ ಅರ್ಜಿಯನ್ನು ಡಿಸೆಂಬರ್ 12ರೊಳಗೆ ಇ–ಮೇಲ್ ವಿಳಾಸ ರಿಜಚಿರಡಿಥಿಣಚಿ@ಥಿಚ್ಞಠಿ.ಛಿಂ.ಟಿ/ ರಿಜಚಿರಡಿಥಿಣಜ@ರಟಚಿಟ.ಛಿಂಟ ಅಥವಾ ಖುದ್ದಾಗಿ ಪೋಸ್ಟ್ ಮುಖಾಂತರ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಎಪಿಎಂಸಿ ರಸ್ತೆ, ಚಿತ್ರದುರ್ಗ–577501 ವಿಳಾಸಕ್ಕೆ ಕಳುಹಿಸಲು ತಿಳಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಸೂಚನೆಗಳು: ಪ್ರತಿ ಸ್ಪರ್ಧಿಗೆ ಒಂದೇ ತಿನಿಸು ಸಿಹಿ ಅಥವಾ ಖಾರ (ಸಸ್ಯಹಾರಿ ತಿನಿಸುಗಳು ಮಾತ್ರ) ತಯಾರಿಸುವ ಅವಕಾಶವಿರುತ್ತದೆ. ತಮ್ಮ ಅರ್ಜಿಯಲ್ಲಿ ನಮೂದಿಸಿದ ತಿನಿಸುಗಳನ್ನು, ಮನೆಯಲ್ಲಿಯೇ ತಯಾರಿಸಿ, ಡಿಸೆಂಬರ್ 13ರಂದು ಬೆಳಿಗ್ಗೆ 11ಕ್ಕೆ ಸರಿಯಾಗಿ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಪ್ರದರ್ಶಿಸುವುದು. ತಯಾರಿಸಿದ ತಿನಿಸುಗಳ ಪ್ರದರ್ಶನ ಬಳಸಿದ ಸಾಮಗ್ರಿಗಳು, ತೋರಿಕೆ, ರುಚಿ, ಸುವಾಸನೆ, ಪೌಷ್ಠಿಕತೆಗಳ ಅಂತಿಮ ತೀರ್ಪು ಕೈಗೊಳ್ಳಲಾಗುವುದು. ತೀರ್ಪುಗಾರರ ನಿರ್ಧಾರವೇ ಅಂತಿಮವಾಗಿರುತ್ತದೆ. ಜಿಲ್ಲಾಮಟ್ಟಕ್ಕೆ ಪ್ರಥಮ ಬಹುಮಾನವಾಗಿ ಖಾರ ತಿನಿಸು ಅಥವಾ ಸಿಹಿ ತಿನಿಸಿಗೆ ತಲಾ ರೂ.5000/– ಬಹುಮಾನವಿರುತ್ತದೆ. ಜಿಲ್ಲಾಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದವರು ಡಿಸೆಂಬರ್ 23ರಂದು ಬೆಂಗಳೂರಿನಲ್ಲಿ ಏರ್ಪಡಿಸುವ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು.

---

#### ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ಎಚ್.ಟಿ.ಚಂದ್ರಣ್ಣ

# ವಿದ್ಯಾರ್ಥಿಗಳಲ್ಲೂ ಸಹ ಮತದಾನ ಜಾಗೃತಿ

» **ಚಳ್ಳಕೆರೆ**

ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಲ್ಲಿ ಮತದಾನದ ಜಾಗೃತಿ ಮೂಡಿಸಲು ಚುನಾವಣಾ ಆಯೋಗದ ಸೂಚನೆ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ ಪ್ರಯುಕ್ತ ಶಾಲಾ ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆಯನ್ನು ಏರ್ಪಡಿಸಿದೆ. ಮತದಾನ ನಮಗೆ ಸಂವಿಧಾನ ನೀಡಿದ ಹಕ್ಕಾಗಿದ್ದು, ಮತದಾನದ ಹಕ್ಕು ಪಡೆದ ಪ್ರತಿಯೊಬ್ಬರೂ ಮತ ಚಲಾಯಿಸಿ ಎಂದು ಜಿಲ್ಲಾ ಇಎಲ್‌ಸಿ ನೋಡಲ್ ಅಧಿಕಾರಿ ಎಚ್.ಟಿ.ಚಂದ್ರಣ್ಣ ತಿಳಿಸಿದರು.

ಅವರು, ನಗರದ ಬಿಇಒ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ತಾಲ್ಲೂಕು ಮಟ್ಟದ ಸ್ಮರ್ಧಾತ್ಮಕ ಕಾರ್ಯಚಟುವಟಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ತಾಲ್ಲೂಕು ಮತದಾರರ ಸಾಕ್ಷರತ ಸಂಘದ ವತಿಯಿಂದ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ಸಂತಸ ತಂದಿದೆ ಎಂದರು.



ಪ್ರಾಸ್ತಾವಿಕವಾಗಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಎಸ್.ಸುರೇಶ್, ತಾಲ್ಲೂಕಿನಾದ್ಯಂತ ಒಟ್ಟು 66 ಶಾಲೆಗಳಿಂದ 120 ವಿದ್ಯಾರ್ಥಿಗಳು ಇಂದು ನಡೆದ ಪ್ರಬಂಧ, ಪೋಸ್ಟರ್ ಡಿಸೈನ್ ಹಾಗೂ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಮಕ್ಕಳಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಲಾಗುತ್ತಿದೆ. ಮತದಾನ ಹಕ್ಕು ಪಡೆದ ಪ್ರತಿಯೊಬ್ಬರೂ ಮತದಾನದಲ್ಲಿ ಪಾಲ್ಗೊಂಡರೆ ಮಾತ್ರ ದೇಶದ ರಾಜಕೀಯ ಹಾಗೂ ಇನ್ನಿತರೆ ಚಟುವಟಿಕೆಗಳನ್ನು ಅರಿಯಲು ಸಾಧ್ಯವೆಂದರು.

ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳ ವಿವರ:–ಪ್ರಬಂಧಸ್ಪರ್ಧೆ(ಕನ್ನಡಮಾಧ್ಯಮ) ಪ್ರಥಮ ಎಸ್.ಸ್ನೇಹ ಎಸ್‌ಜಿಟಿಜಿಎಚ್‌ಎಸ್ ತಳಕು, ದ್ವಿತೀಯ ಎನ್.ಲಿಖಿತ ಎಸ್‌ಟಿಎಸ್‌ಆರ್‌ಎಚ್‌ಎಸ್ ನಾಯಕನಹಟ್ಟಿ, ತೃತೀಯ ಎಸ್.ಅಕ್ಷತ ಶ್ರೀಕೃಷ್ಣಪ್ರೌಢಶಾಲೆ ಚನ್ನಮ್ಮನಾಗತಿಹಳ್ಳಿ, ಇಂಗ್ಲೀಷ್ ಮಾಧ್ಯಮ:– ಪ್ರಥಮ ಎಸ್.ಎಂ.ಸಂಜನ ಎಚ್‌ಟಿಟಿ ಶಾಲೆ, ದ್ವಿತೀಯ ಜಿ.ಆರ್.ಮಾನಸ ವಾಸವಿ ಶಾಲೆ, ತೃತೀಯ ಅಭಿರುಚಿ ಬಿಎಂಜಿಎಚ್‌ಎಸ್, ಪೋಸ್ಟರ್ ಡಿಸೈನ್ ಪ್ರಥಮ ರಿತೀಶ್‌ದೊರೆ ವಾಸವಿಶಾಲೆ, ಸಿ.ಒ.ಲಿಖಿತ ಎಚ್‌ಟಿಟಿ, ತೃತೀಯ ಎಂ.ವಿ.ಕಾರ್ತಿಕ್ ನಾಯಕನಹಟ್ಟಿ, ರಸಪ್ರಶ್ನೆ ಪ್ರಥಮ ಆರ್.ಸುದರ್ಶನ್, ಸಿ.ತಿಪ್ಪೇಸ್ವಾಮಿ ನಾರಾಯಣಪುರ, ದ್ವಿತೀತ ವಿ.ಅನುಷ, ಎಚ್.ವಿ.ಮೈತ್ರಿ ವಾಸವಿಶಾಲೆ, ತೃತೀಯ ಸಹನ ಮತ್ತು ಎನ್.ಬಿ.ವರ್ಷಿಣಿ ವೀರಭದ್ರಸ್ವಾಮಿ ಗ್ರಾಮಾಂತರ ಪ್ರೌಢಶಾಲೆ ಮುಸ್ಟಲಗುಮ್ಮಿ. ಕಾರ್ಯಕ್ರಮದಲ್ಲಿ ತಾಲ್ಲೂಕು ಇಎಲ್‌ಸಿ ನೋಡಲ್ ಅಧಿಕಾರಿ ಮಾರುತಿಭಂಡಾರಿ, ಸಿಆರ್‌ಪಿ ಶಿವಣ್ಣ, ದಾದಾಪೀರ್, ನಾಗರಾಜು, ತೀರ್ಪುಗಾರರಾಗಿ ಎಚ್.ಸಿ.ಶಿವಮೂರ್ತಿ, ಡಿ.ಈರಣ್ಣ,ಮೂರ್ತಿ,ಬೋರಯ್ಯ,ರೂಪಶ್ರೀ ಮುಂತಾದವರು ಉಪಸ್ಥಿತರಿದ್ದರು.

---

## ಅಂತರ್ ಶಾಲಾ ಹ್ಯಾಂಡ್ ರೈಟಿಂಗ್ ಸ್ಪರ್ಧೆ: ವಿಜೇತರಾದವರಿಗೆ ಬಹುಮಾನ ವಿತರಣೆ

» **ಚಿತ್ರದುರ್ಗ**

ಮದೇಹಳ್ಳಿ ರಸ್ತೆ, ಅಗ್ನಿಶಾಮಕ ಠಾಣೆ ಮುಂಭಾಗದಲ್ಲಿರುವ ಶೈನ್ ಅಕಾಡೆಮಿ ಅಬಾಕಸ್ ಟ್ರೈನಿಂಗ್ ಸೆಂಟರ್‌ನಲ್ಲಿ ಜಿಲ್ಲೆಯ ಅಂತರ್ ಶಾಲಾ ಒಂದರಿಂದ ಹತ್ತನೆ ತರಗತಿ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಹ್ಯಾಂಡ್ ರೈಟಿಂಗ್ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ತ.ರಾ.ಸು. ರಂಗಮಂದಿರದಲ್ಲಿ ಭಾನುವಾರ ಬಹುಮಾನ ವಿತರಿಸಲಾಯಿತು.

ಜಿ.ಎಂ.ಯುನಿವರ್ಸಿಟಿ ದಾವಣಗೆರೆಯ ಟ್ರೈನಿಂಗ್ ಅಂಡ್ ರೀಪ್ಲೇಸ್‌ಮೆಂಟ್ ಆಫೀಸರ್ ಡಾ.ತೇಜಸ್ವಿಕಟ್ಟಿಮನಿ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಿ ಮಾತನಾಡುತ್ತ ಶಾಲೆಯಲ್ಲಿ ಪಠ್ಯವನ್ನು ಹೊರತುಪಡಿಸಿ ಇಂತಹ ಸ್ಪರ್ಧೆಗಳಲ್ಲಿ ಮಕ್ಕಳು ಭಾಗವಹಿಸುವುದರಿಂದ ಸ್ಪರ್ಧಾತ್ಮಕ




ಯುಗದಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದರು.ಶೈನ್ ಅಕಾಡೆಮಿ ಆಡಳಿತಾಧಿಕಾರಿ ರೂಪ ವಿಶ್ವನಾಥ್, ಈವೆಂಟ್ ಕೋಆರ್ಡಿನೇಟರ್ ಸವಿತ ಸುನೀಲ್ ಬಹುಮಾನ ವಿತರಣೆಯಲ್ಲಿ ಉಪಸ್ಥಿತರಿದ್ದರು. 330 ಮಕ್ಕಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

## ಸೇವಾ ಭದ್ರತೆ ನೀಡುವಂತೆ ಒತ್ತಾಯಿಸಿ ಅನಿರ್ಧಿಷ್ಟಾವಧಿ ಅಂಚೆ ಸಿಬ್ಬಂದಿ ಮುಷ್ಕರ



» **ಚಳ್ಳಕೆರೆ**

ಕಳೆದ ಹಲವಾರು ವರ್ಷಗಳಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಅಂಚೆ ಇಲಾಖೆಯ ವಿವಿಧ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೂರಾರು ಅಧಿಕಾರಿ, ಸಿಬ್ಬಂದಿ ವರ್ಗ ಸೇವೆ ಖಾಯಂಯಾತಿ, ಸೇವಾ ಭದ್ರತೆಹಾಗೂ ಇನ್ನಿತರ ಸೌಕರ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ತ್ಯಾಗರಾಜ ನಗರದ ಪ್ರಧಾನ ಅಂಚೆ ಕಚೇರಿ ಮುಂದೆ ಅನಿರ್ಧಿಷ್ಟಾವಧಿ ಮುಷ್ಕರವನ್ನು ಮಂಗಳವಾರದಿಂದ ಆರಂಭಿಸಿದರು.

ಅಂಚೆ ಇಲಾಖೆ ನೌಕರರ ಸಂಘದ ಅಧ್ಯಕ್ಷ ಜಿ.ಕೆ.ಪಾಂಡುರಂಗರೆಡ್ಡಿ ಮಾತನಾಡಿ, ಹಲವಾರು ವರ್ಷಗಳ ಕಾಲ ಇಲಾಖೆ ನೀಡುವ ಅಲ್ಪಗೌರವಧನದಲ್ಲಿ ನಾವೆಲ್ಲರೂ ಉತ್ತಮ ಸೇವೆ ಮಾಡುತ್ತಾ ಬಂದಿದ್ದೇವೆ. ಬೆಳಗಿನಿಂದ ಸಂಜೆವರೆಗೂ ಅಂಚೆ ಇಲಾಖೆ ಕಚೇರಿಯಲ್ಲಿದ್ದುಕೊಂಡೇ ಕಾರ್ಯನಿರ್ವಹಿಸುತ್ತಿದ್ದೇವೆ. ಆದರೆ, ನಮಗೆ ಯಾವುದೇ ಸೇವಾಭದ್ರತೆ ಇಲ್ಲ, ವೇತನ ಹೆಚ್ಚಳವಿಲ್ಲ, ಪಿಂಚಣಿ ವ್ಯವಸ್ಥೆ ಇಲ್ಲ, ಅನೇಕರು ನಿವೃತ್ತರಾಗಿ ಇಂದು ಬದುಕು ಸಾಗಿಸಲು ಕಷ್ಟಪಡುತ್ತಿದ್ದಾರೆ. ಆದ್ದರಿಂದ ನಮಗೆ ಸೇವಾ ಭದ್ರತೆ ಹಾಗೂ ಇನ್ನಿತರ ಸೌಲಭ್ಯ ನೀಡಬೇಕೆಂದು ಒತ್ತಾಯಿಸಿದರು. ನಮ್ಮ ಮುಷ್ಕರ ಅನಿರ್ಧಿಷ್ಟಾವಧಿ ನಡೆಯಲಿದೆ ಎಂದರು. ಮುಷ್ಕರದಲ್ಲಿ ಕೆ.ಟಿ.ತಿಮ್ಮಾರೆಡ್ಡಿ, ಎನ್.ಅಜಯ್‌ಕುಮಾರ್, ವಿ.ನಂದಿನಿ, ಬಿ.ಆರ್. ಮಹೇಶ್, ಸಣ್ಣಬೋರಯ್ಯ ಮುಂತಾದವರು ಪಾಲ್ಗೊಂಡಿದ್ದರು.

## ಸಮಾಜದಲ್ಲಿ ಆಳಾವಾಗಿ ಬೇರೂರಿದ್ದ ಜಾತೀಯತೆ ಭಾವನೆಗಳಿಗೆ ಕನಕದಾಸರ ಕೀರ್ತನೆಗಳು ಬೆಳಕು ಚೆಲ್ಲುವಲ್ಲಿ ಸಫಲ: ಶಶಿಕಲಾ

» **ಚಳ್ಳಕೆರೆ**

ಕನಕದಾಸರು ತಾವು ರಚಿಸಿದ ಕೀರ್ತನೆಗಳ ಮೂಲಕ ಸಮಾಜದಲ್ಲಿ ಆಳಾವಾಗಿ ಬೇರೂರಿದ್ದ ಜಾತೀಯತೆ ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದರು. ಭಕ್ತ ಕನಕದಾಸರ ಅಂದಿನ ಕಾರ್ಯ ಇಂದು ಸಮಾಜದಲ್ಲಿ ಜಾತೀಯತೆಯ ಬಗ್ಗೆ ಇರುವ ತಪ್ಪು ಭಾವನೆಗಳು ದೂರವಾಗಿದ್ದು ನಾವೆಲ್ಲರೂ ಕನಕದಾಸರ ಆದರ್ಶಗಳನ್ನು ಪಾಲಿಸಬೇಕೆಂದು



ಜಿಪಂ ಮಾಜಿ ಅಧ್ಯಕ್ಷೆ ಶಶಿಕಲಾಸುರೇಶ್‌ಬಾಬು ತಿಳಿಸಿದರು.

ಅವರು, ತಾಲ್ಲೂಕಿನ ಗೋಪನಹಳ್ಳಿ ಗ್ರಾಮದಲ್ಲಿ ಗ್ರಾಮದ ಕನಕಯುವಕ ಸಂಘ ಹಮ್ಮಿಕೊಂಡಿದ್ದ ಕನಕ ಜಯಂತಿ ಕಾರ್ಯಕ್ರಮವನ್ನು ಕನಕದಾಸರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಕನಕಜಯಂತಿ ಎಲ್ಲಾ ಜನರಿಗೂ ಸ್ಪೂರ್ತಿನೀಡಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದರು.

## ಬಸವಾಪಟ್ಟಣದಲ್ಲಿ ಆರೋಗ್ಯಶಿಬಿರ

» **ಚನ್ನಗಿರಿ**

ಆರೋಗ್ಯದಾಸೋಹ ಎಂಬ ಪರಿಶುದ್ಧ ಪರಿಕಲ್ಪನೆಯೊಂದಿಗೆಗ್ರಾಮೀಣ ಭಾಗದಲ್ಲಿಉಚಿತವಾಗಿಆರೋಗ್ಯ ಸೇವೆ ಮಾಡುತ್ತಿರುವಡಾ. ರವಿಕುಮಾರ್‌ಟಿ.ಜಿಅವರಕಾರ್ಯ ಪವಿತ್ರಅಂತಃಕರಣದಿಂದಕೂಡಿದೆಎಂದು ಹಾಲಸ್ವಾಮಿ ಬೃಹನ್ಮಠದ ಪೀಠಾಧಿಪತಿ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಜಿ ಹೇಳಿದರು.

---

**ಪ್ರಮುಖ ಸುದ್ದಿ**

# ಸಾಂಸ್ಕೃತಿಕ ಸೌರಭ ಕಾರ್ಯಕ್ರಮ–2023







» **ಚಿತ್ರದುರ್ಗ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಿತ್ರದುರ್ಗಹಾಗೂವಿಶ್ವಮಾನವಸಾಂಸ್ಕೃತಿಕ ಮತ್ತು ವಿದ್ಯಾ ಸಂಸ್ಥೆ ಸೀಬಾರ–ಗುತ್ತಿನಾಡು ಇವರ ಸಹಯೋಗದಲ್ಲಿ ಸಾಂಸ್ಕೃತಿಕ ಸೌರಭ ಕಾರ್ಯಕ್ರಮ–2023ನ್ನು ದಿನಾಂಕ:10–12–2023ರ ಭಾನುವಾರ ಸಂಜೆ 4:00 ಗಂಟೆಗೆ ಯಶಸ್ವಿಯಾಗಿ ನೆರವೇರಿಸಲಾಯಿತು. ಈ ಒಂದು ಕಾರ್ಯಕ್ರಮದ ಉದ್ಘಾಟನೆಯನ್ನು ಖ.ಏ. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಚಿತ್ರದುರ್ಗ ಇವರು ಉದ್ಘಾಟಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ಆರ್. ಗಣೇಶ್, ಮಾನ್ಯ ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಮಠದ ಕುರುಬರಹಟ್ಟಿ ಇವರು ವಹಿಸಿದ್ದರು, ಸದರಿ ಕಾರ್ಯಕ್ರಮವನ್ನು ಗುತ್ತಿನಾಡು ಗ್ರಾಮದಿಂದ ನಾಸಿಕ್ ಡೋಲು, ಕಿಂದರಿ ಜೋಗಿ ಕುಣಿತ, ಡೊಳ್ಳು ಕುಣಿತಗಳನ್ನು ಪ್ರದರ್ಶಿಸುವ ಮೂಲಕ ಮೆರವಣಿಗೆಯಲ್ಲಿ ಸಾಗಿಕಾರ್ಯಕ್ರಮಚಾಲನೆನೀಡಲಾಯಿತು. ನಂತರ ವೇದಿಕೆಯಲ್ಲಿ ಸುಗಮ ಸಂಗೀತ, ಜಾನಪದ ಸಂಗೀತ, ಜನಪದ ಗೀತೆಗಳು, ಸಮೂಹ ನೃತ್ಯ, ಭರತನಾಟ್ಯ, ನಾಟಕ ಪ್ರದರ್ಶನ, ನಾಸಿಕ್ ಡೋಲು ವಾದನ, ಕಿಂದರಿಜೋಗಿ ಕುಣಿತ, ಡೊಳ್ಳು ಕುಣಿತ, ಏಕಪಾತ್ರಾಭಿನಯಗಳನ್ನು ಪ್ರದರ್ಶಿಸುವ ಮೂಲಕ ಮನರಂಜಿಸಲಾಯಿತು..

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ ಬಿ.ಎನ್. ಶಂಕರಮ್ಮ, ಸದಸ್ಯರು, ಗ್ರಾಮ ಪಂಚಾಯಿತಿ, ಗುತ್ತಿನಾಡು, ಶ್ರೀ.ಎನ್. ಕಲ್ಲೇಶಪ್ಪ, ಸದಸ್ಯರು, ಗ್ರಾಮ ಪಂಚಾಯಿತಿ, ಗುತ್ತಿನಾಡು, ಶ್ರೀ ರಾಮಾಂಜನೇಯ, ಸದಸ್ಯರು ಗ್ರಾಮಪಂಚಾಯಿತಿ, ಸೀಬಾರ, ಪ್ರಕಾಶ್ ಬಾದರದಿನ್ನಿ, ಕಲಾವಿದರು, ಶ್ರೀ.ಜಿ.ಆರ್.ಚನ್ನಬಸಪ್ಪ, ಮುಖ್ಯೋಪಾಧ್ಯಾಯರು, ವಿಶ್ವಮಾನವ ವಸತಿ ಶಾಲೆ, ಶ್ರೀ.ಬಿ.ಜೆ.ಶಿವರುದ್ರಯ್ಯ. ಮುಖ್ಯೋಪಾಧ್ಯಾಯರು ವಿಶ್ವಮಾನವ ಹಿರಿಯ ಪ್ರಾಥಮಿಕ ಶಾಲೆ, ಶ್ರೀಮತಿ. ಹೆಚ್.ಆರ್.ಸುಧಾ, ಪ್ರಾಂಶುಪಾಲರು ವಿಶ್ವಮಾನವ ಸಂಯುಕ್ತ ಪದವಿ ಪೂರ್ವ ಕಾಲೇಜು ಇವರುಗಳು ಹಾಜರಿದ್ದರು.

## ಫಾಸ್ಟ್ ನ್ಯೂಸ್

### ವಿಜಯ ದಿವಸ ಆಚರಣೆ ಕಾರ್ಯಕ್ರಮ ರದ್ದು

» ಚಿತ್ರದುರ್ಗ

ಇದೇ ಡಿಸೆಂಬರ್ 16ರಂದು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ 1971ರ ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮಾಜಿ ಸೈನಿಕರಿಗೆ ಸರಳ ಸಮಾರಂಭದಲ್ಲಿ ಸನ್ಮಾನಿಸುವ ಮೂಲಕ ವಿಜಯ ದಿವಸವನ್ನು ಆಚರಿಸಲು ಉದ್ದೇಶಿಸಲಾಗಿದ್ದ ಕಾರ್ಯಕ್ರಮವನ್ನು ಬೆಂಗಳೂರು ಸೈನಿಕ ಕಲ್ಯಾಣ ಮತ್ತ ಪುನರ್ವಸತಿ ಇಲಾಖೆ ನಿರ್ದೇಶನಾಲಯದ ಆದೇಶದಂತೆ ಕಾರಣಾಂತರಗಳಿಂದ ರದ್ದುಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08182–220925ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಬಹುದು ಎಂದು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕ ಡಾ.ಸಿ.ಎ.ಹಿರೇಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬೆಂಗಳೂರು ವಿಭಾಗ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ

» ಚಿತ್ರದುರ್ಗ

ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವುದೇ ಬಹುದೊಡ್ಡ ಬಹುಮಾನ. ಬಹುಮುಖ ಪ್ರತಿಭಾವಂತರ ಜೊತೆ ಬೆರೆತು ಅವರೊಂದಿಗೆ ಕಳೆದ ಕ್ಷಣಗಳು ನಿಮ್ಮ ಸಾಧನೆಗೆ ಸ್ಪೂರ್ತಿದಾಯಕ ಎಂದು ಚಿತ್ರದುರ್ಗ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಜಿಲ್ಲಾ ಅಧ್ಯಕ್ಷರಾದ ಬಿ.ಆರ್. ಮಲ್ಲೇಶ್ ಹೇಳಿದರು. ಎಸ್. ಆರ್. ಎಸ್ ಪದವಿ ಪೂರ್ವ ಕಾಲೇಜಿನಲ್ಲಿ ಜರುಗಿದ ಬೆಂಗಳೂರು ವಿಭಾಗ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಿಸಿ ಮಾತನಾಡಿದರು.ಇದೇ ವೇಳೆ11 ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದು ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಆಯ್ಕೆಯಾದ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪಟ್ಟಿಯನ್ನು ಚಿತ್ರದುರ್ಗ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ)ಯ ಉಪ ನಿರ್ದೇಶಕರಾದ ಆರ್ ಪುಟ್ಟಸ್ವಾಮಿ ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘದ ಅಧ್ಯಕ್ಷರಾದ ಎಲ್. ರಂಗಪ್ಪ,ಚಿತ್ರದುರ್ಗ ಜಿಲ್ಲಾ ಸಾಂಸ್ಕೃತಿಕ ಸಮಿತಿಯ ಕಾರ್ಯದರ್ಶಿಗಳಾದ ಬಿ. ಗೋವಿಂದಪ್ಪ ಹಾಗೂ ಸಹ ಕಾರ್ಯದರ್ಶಿಗಳಾದ ನಾಗರಾಜ್ ಬೆಳಗಟ್ಟ,ತಿಪ್ಪೇಸ್ವಾಮಿ ಕೆರೆಯಾಗಳಹಳ್ಳಿ ಉಪಸ್ಥಿತರಿದ್ದರು.

ಬೆಂಗಳೂರು ವಿಭಾಗ ಮಟ್ಟದಿಂದ ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಆಯ್ಕೆಯಾದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಪಟ್ಟಿ: ಭಾವಗೀತೆ: ಪ್ರಥಮ: ಅನನ್ಯ ಎ.ಜೆ ಬೆಂಗಳೂರು ದಕ್ಷಿಣ, ದ್ವಿತೀಯ: ಪೂರ್ವಿಕ ಹೆಚ್.ಬಿ. ತುಮಕೂರು, ತೃತೀಯ: ಪ್ರಾರ್ಥನಾ ಹೆಚ್.ವಿ. ಶಿವಮೊಗ್ಗ,
ಜನಪದ ಗೀತೆ :ಪ್ರಥಮ: ಅದಿತಿ ಸಿ.ಎಸ್.ಕೋಲಾರ, ದ್ವಿತೀಯ: ಸಿಂಚನ ಆರ್. ಶಿವಮೊಗ್ಗ ,ತೃತೀಯ: ದೃತಿ ಆರ್. ಆರ್ ದಾವಣಗೆರೆ ,ಭಕ್ತಿ ಗೀತೆ: ಪ್ರಥಮ: ಅನುಷ್ಕಾ ಅಶ್ವಿನ್ ಪ್ರಭು ಬೆಂಗಳೂರು ಉತ್ತರ, ದ್ವಿತೀಯ: ಸಮರ್ಥ್ ರಘುನಂದನ್ ಬೆಂಗಳೂರು ದಕ್ಷಿಣ, ತೃತೀಯ: ಸಮೃದ್ಧಿ ನಾಯಕ್ ಶಿವಮೊಗ್ಗ, ಆಶುಭಾಷಣ: ಪ್ರಥಮ: ಭಕ್ತಿ ಎಸ್ ಬೆಂಗಳೂರು ದಕ್ಷಿಣ, ದ್ವಿತೀಯ: ಸೌಂದರ್ಯ ಬಿ.ಟಿ. ಚಿತ್ರದುರ್ಗ, ತೃತೀಯ: ರವಿಕಿರಣ್ ದಾವಣಗೆರೆ, ಏಕಪಾತ್ರ ಅಭಿನಯ: ಪ್ರಥಮ ಪೂರ್ಣಿಮಾ ಎಲ್. ಕೋಲಾರ, ದ್ವಿತೀಯ: ತೇಜಸ್ವಿನಿ ಹೆಚ್. ಎಸ್ ಶಿವ ತೃತೀಯ: ಸಹನಾ ಎಚ್.ಪಿ. ದಾವಣಗೆರೆ, ಚಿತ್ರಕಲೆ: ಪ್ರಥಮ: ಮನೋಜ್ ಎ. ಶಿವಮೊಗ್ಗ, ದ್ವಿತೀಯ: ತರುಣ ಕೆ. ಬೆಂಗಳೂರು ಗ್ರಾಮೀಣ, ತೃತೀಯ:ಪ್ರನಮ್ಯ ಶಿವಮೊಗ್ಗ,

ಪ್ರಬಂಧ ಸ್ಪರ್ಧೆ :(ಕನ್ನಡ ಮಾಧ್ಯಮ) ಪ್ರಥಮ: ಅಮೋಘ ಕೃಷ್ಣ ವಿ ಬೆಂಗಳೂರು ಉತ್ತರ, ದ್ವಿತೀಯ: ಮಂಜುಳಾ ಎನ್ ಹೆಚ್ ದಾವಣಗೆರೆ ತೃತೀಯ: ಶಿವಾನಿ ಶಿವಮೊಗ್ಗ, ಪ್ರಬಂಧ ಸ್ಪರ್ಧೆ: (ಇಂಗ್ಲಿಷ್ ಮಾಧ್ಯಮ) ಪ್ರಥಮ: ಶ್ರೇಯ ಜೀವಿ ದಾವಣಗೆರೆ, ದ್ವಿತೀಯ: ಸುಪ್ರಿಯಾ ಬಿ ಬೆಂಗಳೂರು ಉತ್ತರ, ತೃತೀಯ: ಶ್ರೀದೇವಿ ಎಸ್ ಶಿವಮೊಗ್ಗ, ಚರ್ಚಾ ಸ್ಪರ್ಧೆ:( ಕನ್ನಡ ಮಾಧ್ಯಮ) ಪ್ರಥಮ: ವಿ ಶಮ ಅಫ್ರೋಜ್ ದಾವಣಗೆರೆ, ದ್ವಿತೀಯ: ವರ್ಷಿಣಿ ವಿ ಚಿಕ್ಕಬಳ್ಳಾಪುರ, ತೃತೀಯ: ತನ್ಮಯ ಎಂ ವಿ ತುಮಕೂರು,

ಚರ್ಚಾ ಸ್ಪರ್ಧೆ :(ಇಂಗ್ಲಿಷ್ ಮಾಧ್ಯಮ) ಪ್ರಥಮ: ಹಾಸಿನಿ ಎ. ಬೆಂಗಳೂರು ಉತ್ತರ, ದ್ವಿತೀಯ: ಆಯಿಮಾನ್ ತರನಮ್ ಚಿಕ್ಕಬಳ್ಳಾಪುರ, ತೃತೀಯ: ಆಯುಷ ಪಿ ಪಡಗಲ್ ದಾವಣಗೆರೆ, ರಸಪ್ರಶ್ನೆ: ಪ್ರಥಮ: ಪ್ರೀತಂ ಎಂ.ಜೀವನ್ ಗೌಡರ್, ಅಜಯ್ ಕುಮಾರ್ ಆರ್, ದಾವಣಗೆರೆ, ದ್ವಿತೀಯ: ಅಕ್ಷಯ ಸಿ.ಕೆ. ಅಭಯ್ ಜೀ ಗೌಡ, ಬೆಂಗಳೂರು ದಕ್ಷಿಣ, ತೃತೀಯ: ಜ್ಞಾನೇಶ್ ಬಿ. ನವೀನ್ ಕುಮಾರ್ ಎಂ. ಶಿವಮೊಗ್ಗ

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪಟ್ಟಿ: ಭಾವಗೀತೆ: ಪ್ರಥಮ: ವರ್ಷ ಪಿ.ಯು ಚಿತ್ರದುರ್ಗ, ದ್ವಿತೀಯ: ಭೂಮಿಕಾ ಭಾರದ್ವಜ್ ಬೆಂಗಳೂರು ದಕ್ಷಿಣ, ತೃತೀಯ: ದೇವಿಕರಾಣಿ ತುಮಕೂರು,
ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪಟ್ಟಿ: ಭಾವಗೀತೆ: ಪ್ರಥಮ: ವರ್ಷ ಪಿ.ಯು ಚಿತ್ರದುರ್ಗ, ದ್ವಿತೀಯ: ಭೂಮಿಕಾ ಭಾರದ್ವಜ್ ಬೆಂಗಳೂರು ದಕ್ಷಿಣ, ತೃತೀಯ: ದೇವಿಕರಾಣಿ ತುಮಕೂರು, ಜನಪದ ಗೀತೆ :ಪ್ರಥಮ: ಚೇತನ್ ಗೌಡ ಎನ್. ಎಲ್. ಚಿಕ್ಕಬಳ್ಳಾಪುರ, ದ್ವಿತೀಯ: ಸಿಂಚನ ಆರ್. ಶಿವಮೊಗ್ಗ , ತೃತೀಯ: ನಿಂಗರಾಜು ಬಿ. ಆರ್. ರಾಮನಗರ ,

## ಇಂದು ಬೆಂಗಳೂರಿನ ನಯನ ಸಭಾಂಗಣದಲ್ಲಿ ಕಾರ್ಯಕ್ರಮ

# ಹೊನ್ನಾರ ಕೃತಿ ಕವಿ ನಾಗತಿಹಳ್ಳಿಮಂಜುನಾಥ್ ಅವರಿಗೆ ಕರುನಾಡ ಸಿರಿ ಸೇವಾ ರಾಜ್ಯ ಪ್ರಶಸ್ತಿ

» ಹೊಸದುರ್ಗ

ಕಳೆದ ನವಂಬರ್ 25 ರಂದು ಹೊಸದುರ್ಗದ ಸಾಹಿತಿ ನಾಗತಿಹಳ್ಳಿ ಮಂಜುನಾಥ್ ಅವರು ತಮ್ಮ ಕವನ ಸಂಕಲನವಾದ "ಹೊನ್ನಾರ" ಕೃತಿಯನ್ನ ಲೋಕಾರ್ಪಣೆಗೊಳಿಸಿದ್ದ ಬೆನ್ನಹಿಂದೆಯೇ ಶ್ರೀಯುತರಿಗೆ ಕರುನಾಡ ಸಿರಿ ಸೇವಾ ರಾಜ್ಯ ಪ್ರಶಸ್ತಿ"ಲಭಿಸಿರುವುದು ಸಾಹಿತ್ಯ ಕ್ಷೇತ್ರದ ಸೇವೆಗೆ ಮುಮ್ಮುಡಿಗೊಳಿಸಿದಂತಾಗಿದೆ

ಸುಸಂಸ್ಕೃತ ಗೌರವಾನ್ವಿತ ಕುಟುಂಬಕ್ಕೆ ಸೇರಿದ ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರಗಳ ನಿಕಟವರ್ತಿಯಾಗಿ ಸಂಸ್ಕಾರವಂತ ವ್ಯಕ್ತಿತ್ವ ರೂಡಿಸಿಕೊಂಡಿರುವ ನಾಗತಿಹಳ್ಳಿ ಮಂಜುನಾಥ್ ಅವರು ಚಿತ್ರದುರ್ಗ ಜಿಲ್ಲಾ ಹೊಸದುರ್ಗ ತಾಲ್ಲೂಕು ಮಾಡದಕೆರೆ ಹೋಬಳಿಗೆ ಸೇರಿದ ದೇವಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ನಾಗತಿಹಳ್ಳಿ ಎಂಬ ಪುಟ್ಟಹಳ್ಳಿ ಇವರ ಸ್ವ ಗ್ರಾಮ.

ತಾಲ್ಲೂಕಿನ ಹಿರಿಯ ಪತ್ರಕರ್ತ ಎನ್. ಕೆ.ತಿಪ್ಪೇಸ್ವಾಮಿ ಮತ್ತು ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಶ್ರೀಮತಿ ಮಂಜಮ್ಮ ಅವರ ಜೇಷ್ಟಸುಪುತ್ರರಾಗಿದ್ದಾರೆ ಇವರಕುಟಂಬದ ಮತ್ತೊಂದು ಮೈಲುಗಲ್ಲಿನ ಪುಷ್ಟಿ ಎಂದರೆ ಮಂಜುನಾಥ್ ಅವರ ಅಜ್ಜ ದಿ:ಕರಿಯಪ್ಪ ಸ್ವಾತಂತ್ರ್ಯ ಹೋರಾಟಗಾರರು ಅಂತಹ ಒಂದು ಕುಟುಂಬದಲ್ಲಿ ಜನಿಸಿ ಬಂದಿರುವ ಮಂಜುನಾಥ್ ಸಮಾಜಕ್ಕೆ ಏನನ್ನಾದರೂ ಸೇವೆ ಸಲ್ಲಿಸಬೇಕು ಎಂಬುದು ಅವರ ಮನದಾಳದ ತುಡಿತವಾಗಿದೆ.

ಸಮಾಜವನ್ನ ಬರವಣಿಗೆಯ ಮೂಲಕ ತಿದ್ದುವ ಚಿಂತನೆ ಮೈಗೂಡಿಸಿಕೊಂಡು ತಂದೆಯ ಪತ್ರಿಕೋದ್ಯಮದ ಕ್ಷೇತ್ರವನ್ನೆ ಆಯ್ಕೆಮಾಡಿಕೊಂಡ ಮಂಜುನಾಥ್ ಉತ್ತಮ ಪತ್ರಕರ್ತರಾಗಿ ಸಾಹಿತಿಯಾಗಿ ಕವಿಯಾಗಿ ವಾಗ್ಮಿಯಾಗಿ ಕಲಾವಿದರಾಗಿ ಕ್ರೀಡಾಪಟುವಾಗಿ ಸದಾ ಸಮಾಜ ಮುಖಿಯಾಗಿ ಮುಖ್ಯವಾಹಿನಿಯಲ್ಲಿ ಮುನ್ನಡೆಯುತ್ತಿದ್ದಾರೆ ಅದೇ ರೀತಿ ಸಂಘಟನೆಯಲ್ಲೂ ದಾಪುಗಾಲು ಹಾಕುತ್ತಿದ್ದಾರೆ,

ಇವರುಸದಾಸಾಹಿತ್ಯಾಚಟುವಟಿಕೆಗಳಲ್ಲಿ ನಿರುತರಾಗಿರುತ್ತಾರೆ ಉತ್ತಮ ಗ್ರಂಥಗಳ ಅದ್ಯಯನ ಅಭಿರುಚಿಯನ್ನು ಚೆನ್ನಾಗಿ





ಮೈಗೂಡಿಸಿಕೊಂಡಿದ್ದಾರೆ.

1997 ರಲ್ಲಿ ಮೈಸೂರು ನಗರದಲ್ಲಿ ಚುಟುಕು ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ರಾಜ್ಯ ಮಟ್ಟದ ಚುಟುಕ ಸಾಹಿತ್ಯ ಗೋಷ್ಟಿಯಲ್ಲಿ ಇರು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಕವನ ವಾಚನ ಮಾಡಿ ಸಭಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ

ಹೊಳಲ್ಕೆರೆ ಪಟ್ಟಣದಲ್ಲಿ 2002ರಲ್ಲಿ ನಡೆದ ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ ವೇದಿಕೆಯ ರಾಜ್ಯ ಮಟ್ಟದ ಕವಿಗೋಷ್ಟಿಯಲ್ಲಿ ಇವರು ತಮ್ಮ ಕವನ ವಾಚನಮಾಡಿ ಸಭಿಕರ ಗಮನ ಸೆಳೆದಿದ್ದಾರೆ ಅಲ್ಲದೆ 2002 ರಲ್ಲಿ ಚಿತ್ರದುರ್ಗ ನಗರದಲ್ಲಿ ಮೂರುದಿನಗಳ ಕಾಲ ಅದ್ದೂರಿಯಿಂದ ನಡೆದ ದುರ್ಗೋತ್ಸವ ಕಾರ್ಯಕ್ರಮದಲ್ಲಿ ಇವರು ಜಾನಪದ ಸಂಗೀತ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದರು

ಅದೇ ರೀತಿ 2008 ರಲ್ಲಿ ಹೊಳಲ್ಕೆರೆಯಲ್ಲಿ ಆಯೋಜಿಸಿದ್ದ ಚುಟುಕ ಸಾಹಿತ್ಯ ಪರಿಷತ್ತಿನ ಜಿಲ್ಲಾ ಕವಿ ಗೋಷ್ಟಿ 2005 ರಲ್ಲಿ ಹಿರಿಯೂರು ತಾಲ್ಲೂಕು ಧರ್ಮಪುರದಲ್ಲಿ ಏರ್ಪಡಿಸಿದ್ದ ಜಿಲ್ಲಾ ವಸಂತ ಕಾವ್ಯ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿ ಪಡೆದಿದ್ದಾರೆ

ಶ್ರೀಯುತರು ಸುವರ್ಣ ಕರ್ನಾಟಕ ಸಾಂಸ್ಕೃತಿಕ ದಿಬ್ಬಣ ಸಮಾವೇಶದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ ದಿನಾಂಕ 27/1/2008ಂದು ಹೊಸದುರ್ಗದಲ್ಲಿ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ರಾತಿ ಕವಿಗೋಷ್ಟಿಯಲ್ಲಿ ಸಾಹಿತ್ಯಾಭಿಗಳ ಗಮನ ಸೆಳೆದರು

2008 ನೇ ಫೆಬ್ರವರಿಯಲ್ಲಿ ಹೊಸದುರ್ಗದಲ್ಲಿ ನಡೆದ 9ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಪ್ರಧಾನ ಸಂಚಾಲಕರಾಗಿದ್ದರು ರಾಜ್ಯ ಮಟ್ಟದ ಸ್ವತಂತ್ರ ಪೂರ್ವ ಪತ್ರಿಕೆಯಾದ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ತಾಲ್ಲೂಕು ವರದಿಗಾರರಾಗಿ ಹಾಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಹಲವು ಹತ್ತು ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ಸಮಾಜ ಸೇವಾ ಕಾರ್ಯಗಳಿಗೆ ತಮ್ಮ ಬಹುಪಾಲು ಸಮಯವನ್ನು ವಿನಿಯೋಗಿಸುತ್ತಿದ್ದಾರೆ. ಸಾಹಿತ್ಯದ ಜೋತೆ ಜೋತೆಗೆ 1995 ರಿಂದ ಪತ್ರಿಕಾ ವೃತ್ತಿಯಲ್ಲಿ ನಿರಂತರವಾಗಿ ಕಾರ್ಯ ನಿರುತರಾಗಿದ್ದಾರೆ. ಹೊಸದುರ್ಗದ ವಾರ ಪತ್ರಿಕೆಗಳಾದ ಹೊಸದುರ್ಗ ಬಿಂಬ, ನೀಲಮಣಿ, ಗೊರವಿನಕಲ್ಲು ಪತ್ರಿಕೆಗಳಿಗೆ ಅಂಕಣಕಾರರಾಗಿಯೂ ಕಾರ್ಯನಿರ್ವಹಿಸಿದ್ದಾರೆ, ರಾಜ್ಯದ ಹಲವು ಪ್ರಮುಖ ಪತ್ರಿಕೆಗಳಲ್ಲಿ ವರದಿಗಾರರಾಗಿ ಸೇವೆ ಸಲ್ಲಿಸಿ ಅವರ ವಿಶೇಷ ಬರವಣಿಗೆಗಳ ಮೂಲಕ ಛಾಪು ಮೂಡಿಸಿದ್ದಾರೆ.

ರಾಜ್ಯದ ಪ್ರತಿಷ್ಠಿತ ಪತ್ರಿಕೆಗಳಲ್ಲಿ ವಾರ ಪತ್ರಿಕೆಗಳಲ್ಲಿ ವಿಶೇಷಾಂಕ ಮಸ್ತಕಗಳಲ್ಲಿ ಹಾಗೂ ಸ್ಮರಣ ಸಂಚಿಕೆಗಳಲ್ಲಿ ಇವರ ಕಥೆ ಕವನ ಲೇಖನ ವಿಮರ್ಶೆಗಳು ಪ್ರಕಟವಾಗುತ್ತಲೇ ಇರುತ್ತವೆ. ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಶಾಖೆ ನಿರ್ದೇಶಕರಾಗಿ ಸಂಚಾಲಕರಾಗಿ ಕಾರ್ಯದರ್ಶಿಯಾಗಿ ಕೆಲಸ ಮಾಢಿದ್ದಾರೆ ಅಲ್ಲದೆ ಚಿತ್ರದುರ್ಗ ಜಿಲ್ಲಾ ಕಾರ್ಯ ನಿರುತ ಪತ್ರಕರ್ತರ ಸಂಘದಲ್ಲಿ ಪ್ರಸ್ತುತ ವರ್ಷದ ಎರಡನೇ ಅವಧಿಗೆ ಅವಿರೋಧವಾಗಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಈ ಹಿಂದೆ ತಾಲ್ಲೂಕು ಪತ್ರಕರ್ತರ ಸಂಘದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಸರಳ ಸಜ್ಜನಿಕೆ ವ್ಯಕ್ತಿತ್ವ ಹೊಂದಿರುವ ಇವರು ದೈವಭಕ್ತರಾಗಿ ಗುರು ಹಿರಿಯರಲ್ಲಿ ಗೌರವ ಹೊಂದಿದ್ದಾರೆ ತಾಲ್ಲೂಕಿನ ಎಲ್ಲಾ ಮಠಾಧಿಪತಿಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಿ ದ್ದಾರೆ ನೇರ ನುಡಿ ದಿಟ್ಟ ಹೆಜ್ಜೆ ಇವರ ಪ್ರವೃತ್ತಿಯಾಗಿದೆ ಗಂಬೀರ ಸ್ವಭಾವಕ್ಕೆ ಇವರು ಇನ್ನೊಂದು ಹೆಸರಾಗಿದ್ದಾರೆ.



ನಾಗತಿಹಳ್ಳಿ ಮಂಜುನಾಥ್ ಅವರು ಕನ್ನಡ ನಾಡು ನುಡಿ ನೆಲ ಜಲದ ಬಗ್ಗೆ ಅತ್ಯಂತ ಕಾಳಜಿ ವಹಿಸಿರುತ್ತಾರೆ ಕನ್ನಡಕ್ಕೆ ಕಳಂಕ ಮೂಡಿಸುವವರ ಬಗ್ಗೆ ಸದಾ ಎಚ್ಚರ ವಹಿಸುತ್ತಾರೆ ಆಡಳಿತ ಮತ್ತು ಶಿಕ್ಷಣದ ಎಲ್ಲಾ ಹಂತಗಳಲ್ಲೂ ಕನ್ನಡಕ್ಕೆ ಅಗ್ರ ಸ್ಥಾನವಿರಬೇಕೆಂಬುದು ಇವರ ಒತ್ತಾಸೆಯಾಗಿದೆ.

ಸಾಹಿತ್ಯಸೇವೆ: ಹೊಸದುರ್ಗ ತಾಲೂಕು ಚುಟುಕು ಸಾಹಿತ್ಯ ಪರಿಷತ್ತಿನ ಹಾಗೂ ತಾಲೂಕು ಮಕ್ಕಳ ಸಾಹಿತ್ಯ ಪರಿಷತ್ತಿನ (ಮಾಜಿ) ಅಧ್ಯಕ್ಷನಾಗಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ (ಮಾಜಿ) ಕಾರ್ಯದರ್ಶಿಯಾಗಿ, ಕರ್ನಾಟಕ ಬಾಲ ವಿಕಾಸ ಅಕಾಡಮಿಯ ಚಿತ್ರದುರ್ಗ ಜಿಲ್ಲಾ ಅನುಷ್ಠಾನ ಸಮಿತಿಯ (ಮಾಜಿ) ಸದಸ್ಯನಾಗಿ ಸಿರಿಗನ್ನಡ ವೇದಿಕೆಯ ಹಾಲಿ ಉಪಾಧ್ಯಕ್ಷನಾಗಿ ಕಾರ್ಯಬಾರ ನಿರ್ವಹಣೆಯಲ್ಲಿ ನಿರುತರಾಗಿದ್ದಾರೆ.

ಪ್ರಕಟಿತ ಕೃತಿಗಳು: ಹೊನ್ನಾರ (ಕವನ ಸಂಕಲನ) ಯಂಕ–ಮಂಕ (ಅಂಕಣ ಬರಹ)–ನೀಲಮಣಿ ಪತ್ರಿಕೆ, ನೀ ಹೇಳಿದ್ದಿಂಗೆ ಬಾ ಬರ್‌ದಿದ್ದಿಂಗೆ (ಅಂಕಣ ಬರಹ)–ಗೊರವಿನಕಲ್ಲು ವಾರ ಪತ್ರಿಕೆ,ರಾಜ್ಯ ಮಟ್ಟದ ಪತ್ರಿಕೆಗಳಾದ ಸಂಯುಕ್ತಕರ್ನಾಟಕ, ಕರ್ಮವೀರ, ಮಂಗಳ, ಸಂಜೆವಾಣಿ. ಈ ಸಂಜೆ, ಸಂಜೆ ಮುಗಿಲು ಚಂದ್ರವಳ್ಳಿ,ನಮ್ಮಜನ, ಉದಯಕಾಲ ಮತ್ತಿತರೆ ಹಲವಾರು ಪತ್ರಿಕೆಗಳಲ್ಲಿ ಲೇಖನಗಳು ಹಾಗೂ ಕವನಗಳು ಪ್ರಕಟಗೊಂಡಿವೆ,ರಾಜ್ಯದ ವಿವಿಧ ಪತ್ರಿಕೆಗಳಲ್ಲಿ ಲೇಖನಗಳು,ಸಾಹಿತ್ಯ ಸಂವಾದಗಳು ಪ್ರಕಟಗೊಂಡಿವೆ,ಶಿಕ್ಷಣಜ್ಞಾನ ಮಾಸ ಪತ್ರಿಕೆಗಳಲ್ಲಿ ಅಂಕಣ ಬರಹ ಹಾಗೂ ಬಿಡಿ ಲೇಖನಗಳ ಬರಹ.ಚಿತ್ರದುರ್ಗ ಆಕಾಶವಾಣಿಯಲ್ಲೂ ಸಹಾ ಇವರು ಕವನ ವಾಚನ ಮಾಡಿದ್ದಾರೆ.

ಕವಿಗೋಷ್ಟಿಗಳು:1997 ರಲ್ಲಿ ಮೈಸೂರು ನಗರದಲ್ಲಿ ಚುಟುಕು ಸಾಹಿತ್ಯಪರಿಷತ್ತುಆಯೋಜಿಸಿದ್ದ ರಾಜ್ಯ ಮಟ್ಟದ ಚುಟುಕು ಸಾಹಿತ್ಯ ಗೋಷ್ಟಿಯಲ್ಲಿ ಭಾಗವಹಿಸಿ ಚಟುಕು ಶ್ರೀ ಪ್ರಶಸ್ತಿ"2002 ರಲ್ಲಿ ಹೊಳಲ್ಕೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ ವೇದಿಕೆಯ ರಾಜ್ಯ ಮಟ್ಟದ ಕವಿಗೋಷ್ಠಿಯಲ್ಲಿ,2002 ರಲ್ಲಿ ಚಿತ್ರದುರ್ಗ ನಗರದಲ್ಲಿ ಮೂರು ದಿನಗಳ ಕಾಲ ನಡೆದ ದುರ್ಗೋತ್ಸವ ಕಾರ್ಯಕ್ರಮದಲ್ಲಿ ಜಾನಪದ ಸಂಗೀತಕರ್ಯಕ್ರಮದಲ್ಲಿ ಭಾಗಿ,2008 ನೇ ಫೆಬ್ರವರಿಯಲ್ಲಿ ಹೊಸದುರ್ಗದಲ್ಲಿ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಸಂಚಾಲಕನಾಗಿ ಜೋತೆಗೆ ಕವಿಗೋಷ್ಟಿ ಹಾಗೂ ಸಂವಾದ ಗೋಷ್ಟಿಯಲ್ಲಿ ಹಾಗೂ ಸಾಣೇಹಳ್ಳಿ ಶ್ರೀ ಮಠದಲ್ಲಿ ಆಯೋಜಿಸಲಾಗಿದ್ದ ಸಂವಾದ ಗೋಷ್ಟಿಯಲ್ಲಿ ಹಾಗೂ ನೂರಾರು ಕವಿಗೋಷ್ಟಿಗಳಲ್ಲಿ ಭಾಗಿಯಾಗಿ ಪ್ರಶಸ್ತಿ ಪದಕಗಳನ್ನು ಪಡೆದಿದ್ದಾರೆ.

ಪಡೆದ ಪ್ರಶಸ್ತಿಗಳು: ರಾಜೀವ್‌ಗಾಂಧಿರಾಷ್ಟ್ರೀಯ ಪ್ರಶಸ್ತಿ (2014),ಕರ್ನಾಟಕ ವಿಕಾಸ ರತ್ನ ರಾಜ್ಯ ಪ್ರಶಸ್ತಿ (2014) ಕರ್ನಾಟಕ ಭೂಷಣ ರಾಜ್ಯ ಪ್ರಶಸ್ತಿ (2014) ಜವಾಹರಲಾಲ್ ನೆಹರು ,ರಾಷ್ಟ್ರೀಯ ಪ್ರಶಸ್ತಿ (2015) ಕನ್ನಡ ಗಾರುಡಿಗ ರಾಜ್ಯ ಪ್ರಶಸ್ತಿ (2016) ಕನ್ನಡ ರತ್ನ ರಾಜ್ಯ ಪ್ರಶಸ್ತಿ ( 2016) ಸಾಹಿತ್ಯ ಸೇವಾ ರತ್ನ (2018) ತಾಲೂಕು ರಾಜ್ಯೋತ್ಸವ ಪ್ರಶಸ್ತಿ (2020) ಕನ್ನಡ ಸೇವಾ ರತ್ನ ರಾಜ್ಯ ಪ್ರಶಸ್ತಿ (2021) ಕಲ್ಯಾಣ ಸೇವಾ ಕಲಾ ರತ್ನ ಜಿಲ್ಲಾ ಪ್ರಶಸ್ತಿ (2022) ಸಾಹಿತ್ಯ ಸೇವಾ ರತ್ನ (2022) ವಿಶ್ವ ಕನ್ನಡ ಸೌಹಾರ್ಧ ಮಾಧ್ಯಮ ಪ್ರಶಸ್ತಿ (2023) ಕರುನಾಡ ಸಿರಿ ಸೇವಾ ರಾಜ್ಯ ಪ್ರಶಸ್ತಿ (2023) ಹಾಗೂ ಇನ್ನು ಅನೇಕ ಪ್ರಮುಖ ಪ್ರಶಸ್ತಿಗಳು ಮತ್ತು ಅಭಿನಂದನಾ ಪತ್ರಗಳು ದೊರೆತಿವೆ.

# ರಾಮರಾಜ್ಯ ಕಲ್ಪನೆಗೆ ದಾರಿದೀಪವಾಗಲಿ

» ಹೊಸದುರ್ಗ

ರಾಮಮಂದಿರ ನಿರ್ಮಾಣ ಆಯ್ತು, ಆದರೆ ರಾಮರಾಜ್ಯ ನಿರ್ಮಾಣ ಕಾರ್ಯ ಬಾಕಿಯಿದೆ. ಎಲ್ಲರೂ ನಿಸ್ವಾರ್ಥತೆಯಿಂದ ದೇಶ ಸೇವೆ ಮಾಡಿ, ರಾಮನಿಗೆ ಅರ್ಪಿಸೋಣ. ಈ ವಿಶ್ವ ಹೃದಯ ಸಮ್ಮೇಳನದಲ್ಲಿ ರಾಮರಾಜ್ಯ ಕಲ್ಪನೆಗೆ ದಾರಿದೀಪವಾಗಲಿ ಎಂದು ಪೇಜಾವರ ಅಧೋಕ್ಷಜ ಮಠಾಧೀಶರಾದ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು ಹೇಳಿದರು.

ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ ಟ್ರಸ್ಟ್ ಹಾಗೂ ಸಿದ್ಧ ಸಮಾಧಿ ಯೋಗ ಹಾಗೂ ಹೊಸದುರ್ಗ ಸದ್ಗುರು ಸೇವಾಶ್ರಮದ ವತಿಯಿಂದ ಪಟ್ಟಣದ ' ಸದ್ಗುರು ಸೇವಾಶ್ರಮದಲ್ಲಿ' ಭಾನುವಾರ ಸಜೆಜ ಆಯೋಜಿಸಿದ್ದ '3 ನೇ ದಿನದ ವಿಶ್ವ ಹೃದಯ ಸಮ್ಮೇಳನ ಹಾಗೂ ಸಮಾರೋಪ ಸಮಾರಂಭ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಲೋಕವೆಲ್ಲಾ ಸುಖದಿಂದ ಇರಬೇಕೆಂದು




ಬಯಸುವುದೇ ಧರ್ಮ ಸುಖ ಸಂತೋಷ ಪ್ರಯತ್ನದಿಂದ ಪಡೆಯಬೇಕು. ಅದು ನೆರೆ ಹೊರೆಯವರಿಗೆ ದುಃಖ ಕೂಡುವಂತಿರಬಾರದು, ಲೋಕದ ಸಂತೋಷಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟ ಶ್ರೀರಾಮನ ಆದರ್ಶ ಎಲ್ಲರೂ ಮೈಗೂಡಿಸಿಕೊಳ್ಳಿ ಎಂದು ಕರೆ ನೀಡಿದರು.

ಮನುಷ್ಯನಿಗೆ ನೋವು, ಸಂತೋಷ ಆದಾಗ ಅದರ ಅನುಭವ ಸಿಗೋದು ಹೃದಯದಲ್ಲಿ. ದೇವರು ಮನುಷ್ಯನಿಗೂ ಹೃದಯ, ನಾಲಿಗೆ ಮತ್ತು ಹೊಟ್ಟೆಯನ್ನು ಒಂದೇ ಕೊಟ್ಟಿದ್ದಾನೆ. ಹೃದಯದ ಭಾವನೆಗಳಿಗೆ ಅರಿತು ನಾಲಿಗೆ ಕೆಲಸ ಮಾಡಲಿ. ಬದುಕಲಿಕ್ಕಾಗಿ ತಿನ್ನು .ಇನ್ನೊಬ್ಬರ ಹೃದಯದ ಭಾವನೆಗಳಿಗೆ ಸ್ಪಂದಿಸುವ ಕೆಲಸವಾಗಬೇಕು ಎಂಬ ಉದ್ದೇಶದಿಂದ ದೇವರು ಹೀಗೆ ಮಾಡಿದ್ದಾನೆ ಎಂದರು. ಹೊರನಾಡಿನ ಅನ್ನಪೂರ್ಣೇಶ್ವರಿ ಅಮ್ಮನವರ ಧರ್ಮಕರ್ತರಾದ ಜಿ. ಭೀಮೇಶ್ವರ ಜೋಶಿ ಆಶೀರ್ವಚನ ನೀಡಿ ಸಮ್ಮೇಳನಗಳಿಂದ ಒಳ್ಳೆಯ ಸತ್ಸಂಗ ಆಗಬೇಕು. ಮತ್ತೊಬ್ಬರು ಅನುಸರಿಸುವ ರೀತಿಯಲ್ಲಿ ಬದಲಾವಣೆ ಕಾಣಬೇಕು. ಎಲ್ಲದಕ್ಕಿಂತಲೂ ಮಿಗಿಲಾದ ಸಂಪತ್ತು ದೈವ ಸಂಪತ್ತು. ಪರಿಶುದ್ಧವಾದ ಪ್ರೀತಿಯಿಂದ ಎಲ್ಲರನ್ನೂ ಗೆಲ್ಲಬೇಕು ಎಂದರು.

# ಸಾಣೇಹಳ್ಳಿಯಲ್ಲಿ ಶೀಘ್ರವೇ ಅಂತರ ಜಿಲ್ಲಾ ಸಮ್ಮೇಳನ

» ಹೊಸದುರ್ಗ

ತಾಲೂಕಿನ ರಂಗ ಕ್ಷೇತ್ರವಾದ ಸಾಣೆಹಳ್ಳಿಯಲ್ಲಿ ಶೀಘ್ರವೇ ಅಂತರ ಜಿಲ್ಲಾ ಸಮ್ಮೇಳನ ಜರುಗಲಿದೆ ಎಂದು ಕಸಾಪ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಷಿ ಹೇಳಿದ್ದಾರೆ. ಅವರು ಭಾನುವಾರ ಸಂಜೆ ತಾಲೂಕಿನ ಸಾಣೇಹಳ್ಳಿಯಲ್ಲಿ ಜರುಗಿದ ಮಹತ್ವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಇಲ್ಲಿನ ಮಠದಲ್ಲಿ ಜಾತಿ ಮತ್ತು ಧರ್ಮವನ್ನು ಮೀರಿದ ಕಲಾ ಪ್ರಪಂಚವಿದೆ. ಇದೇ ರೀತಿಯಲ್ಲಿ ಸಾಹಿತ್ಯ ಪರಿಷತ್ತಿನಲ್ಲಿ ಯಾವುದೇ ಪಂಥಗಳಿಲ್ಲ. ಪ್ರತಿಯೊಬ್ಬರಿಗೆ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶವಿದೆ. ಆದರೆ ಇನ್ನೊಬ್ಬರ ಅಭಿಪ್ರಾಯವನ್ನು ಗೌರವಿಸುವ ಗುಣವನ್ನು ಬೆಳೆಸಿಕೊಳ್ಳಬೇಕು. ಪರಿಷತ್ತಿನಲ್ಲೆ ಕೇವಲ ಕನ್ನಡದ ಪಂಥ ಮಾತ್ರ ರೂಢಿಯಲ್ಲಿದೆ. ಸಮ್ಮೇಳನವು ಸಾಹಿತ್ಯ,ಸಂಸ್ಕೃತಿ ಮತ್ತು ಕಲೆಗೆ ಮಾತ್ರ ಸಂಬಂಧಿಸಿದೆ. ಧಾರ್ಮಿಕ ಅಭಿಪ್ರಾಯಗಳು ಸಮ್ಮೇಳನದಲ್ಲಿ ಅಪ್ರಸ್ತುತವಾಗಿವೆ. ಹೀಗಾಗಿ ಸಮ್ಮೇಳದಲ್ಲಿ ಯಾವುದೇ ಗೊಂದಲಗಳಿಲ್ಲ. ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿರುವ ಚಲನಚಿತ್ರದ ಹಾಗೂ ಜಾನಪದದ ಬಗ್ಗೆ ಗೋಷ್ಠಿಗಳಿರಬೇಕು.ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳಿಸುವುದು ಹೆಚ್ಚಿನ ಆರ್ಥಿಕ ಹೊರೆಯಾಗಿದೆ ಎಂದರು.

## ಪ್ರಮುಖ ಸುದ್ದಿ

# ಸ್ವತಂತ್ರ ಬದುಕುವ ಮನಸ್ಥಿತಿ ಮಕ್ಕಳಲ್ಲಿ ಬೆಳೆಸಬೇಕು

» ಹೊಸದುರ್ಗ

ವಿದ್ಯಾರ್ಥಿಗಳು ಸಂಸ್ಕಾರಯುತ ಶಿಕ್ಷಣ, ಆಧ್ಯಾತ್ಮ, ಅನುಭವ, ಮನೋರಂಜನೆ ಎಂಬ ನಾಲ್ಕು ಅಂಶಗಳ ಮೂಲಕ ವ್ಯಕ್ತಿತ್ವ ವಿಕಾಸನ ಮಾಡಿಕೊಳ್ಳಬೇಕು. ಅಜ್ಞಾನ ಇಲ್ಲದಂತೆ ವರ್ತನೆ ಮಾಡುವವನನ್ನು ಮಾನವ ಎನ್ನುತ್ತೇವೆ. ಸೌಲಭ್ಯದ ಜೊತೆಗೆ ಸಂಸ್ಕಾರ ಕೊಡಬೇಕು. ಸ್ವತಂತ್ರವಾಗಿ ಬದುಕುವ ಮನಸ್ಥಿತಿಯನ್ನು ಮಕ್ಕಳಲ್ಲಿ ಬೆಳೆಸಬೇಕು ಎಂದು ಎಸ್. ನಿಜಲಿಂಗಪ್ಪ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೆ.ಎಸ್. ಕಲ್ಮಠ ಹೇಳಿದರು.

ಪಟ್ಟಣದ ಎಸ್. ನಿಜಲಿಂಗಪ್ಪ ಜನ್ಮದಿನಾಚರಣೆ ಹಾಗೂ ನಿಜಲಿಂಗಪ್ಪ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯದ್ವಾರದ ಉದ್ಘಾಟನೆ ಹಾಗೂ ಹಿರಿಯ ವಿದ್ಯಾರ್ಥಿ ಸಂಘದ ಉದ್ಘಾಟನೆ ಮತ್ತು ಯುವ ಸ್ಪಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ತಂದೆ ಮತ್ತು ತಾಯಿಯ



ಮಾರ್ಗದರ್ಶನದಲ್ಲಿ ಬೆಳೆದ ಮಗು ಸಂಸ್ಕಾರವಂತನಾಗುತ್ತದೆ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ಆದರ್ಶ ಬದುಕಿನಂತೆ ನಮ್ಮ ಶಿಕ್ಷಣ ಸಂಸ್ಥೆಯು ಮಕ್ಕಳಿಗೆ ಗುಣಮಟ್ಟ ಹಾಗೂ ಪ್ರಾಮಾಣಿಕ ಶಿಕ್ಷಣ ನೀಡುತ್ತಾ ಬಂದಿದೆ. ಇದೊಂದು ಐತಿಹಾಸಿಕ ಸಮಾರಂಭ. ಕಳೆದ 19 ವರ್ಷಗಳಿಂದ ಸಂಸ್ಥೆಯ ಮೂಲಕ ಗುಣಮಟ್ಟದ ಶಿಕ್ಷಣ ನೀಡಿದ ತೃಪ್ತಿಯಿದೆ. ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಕಾರಣಕ್ಕೆ ಇವತ್ತಿನ ದಿನಮಾನಗಳಲ್ಲಿ ಅವಶ್ಯಕತೆ ಇರುವ ಮೂಲಸೌಕರ್ಯ ಒದಗಿಸಿದ್ದೇವೆ. ಇಲ್ಲಿನ ಮಕ್ಕಳು ಕ್ರೀಡೆಯಲ್ಲಿ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಹಳೆಯ ವಿದ್ಯಾರ್ಥಿಗಳ ಸಾಧನೆ ಕಂಡು ನಮ್ಮ ಶ್ರಮಕ್ಕೆ ಫಲ ಸಿಕ್ಕಿದೆ ಎಂದು ಭಾವಿಸಿರುವುದಾಗಿ ಹೇಳಿದರು.

ದಾವಣಗೆರೆ ಎವಿಕೆ ಕಾಲೇಜು ಉಪನ್ಯಾಸಕಿ ಡಾ.ಗೀತಾ ಬಸವರಾಜ್ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಬದುಕನ್ನು ಹೇಗೆ ರೂಪಿಸಿಕೊಳ್ಳುತ್ತವೆ ಎನ್ನುವುದರ ಮೇಲೆ ಭವಿಷ್ಯ ನಿರ್ಮಾಣ ಆಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಣ ಎನ್ನುವ ಸಂಸ್ಕಾರ ಬೇಕು. ಒಂದು ದೇಶದ ಶ್ರೀಮಂತಿಕೆ ಅಲ್ಲಿನ ಚಿನ್ನ ಬೆಳ್ಳಿಯಲ್ಲಿ ಇಲ್ಲ. ಚಿನ್ನದಂತಹ ವ್ಯಕ್ತಿಗಳ ವ್ಯಕ್ತಿತ್ವದಲ್ಲಿ ಅಡಗಿದೆ. ಆ ಚಿನ್ನದಂತಹ ವಿದ್ಯಾರ್ಥಿಗಳ ಭವಿಷ್ಯವನ್ನು ಪೋಷಕರು, ಶಿಕ್ಷಕರು, ಧರ್ಮ ಗುರುಗಳು ನಿರ್ಮಾಣ ಮಾಡುತ್ತಾರೆ ಎಂದರು.

ಎಸ್. ನಿಜಲಿಂಗಪ್ಪ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಶಿವಲಿಂಗಪ್ಪ, ಧರ್ಮದರ್ಶಿಗಳಾದ ಪಾರ್ವತಮ್ಮ ಹಾಲಪ್ಪ, ವಿಜಯ ಶಿವಲಿಂಗಪ್ಪ, ಮಂಜುಳಾ ಕಲ್ಲೇಶ್, ಎಚ್. ಎಂ. ಗಿರಿಜಾ ಗುರುಸಿದ್ದಯ್ಯ, ಜಿ.ವೀಣಾ ನಟರಾಜ್, ಕೆ.ಲೀಲಾ ಏಕಾಂತ್‌ರಾಜು ಮತ್ತಿತರಿದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T